ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari

Volume - 11
Issue - 11
Pages - 20
₹ - 12
November- 2013

## ಸಂಭ್ರಮದ 60ನೇ ಅಖಿಲ ಭಾರತ ಸಹಕಾರ ಸಪ್ತಾಹ



60ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಶ್ರೀ ಡಿ.ಟಿ. ಪಾಟೀಲ್, ಶ್ರೀ ಸಿ.ಎನ್. ಪರಶಿವಮೂರ್ತಿ, ಶ್ರೀ ಎಂ.ಎನ್. ರಾಜೇಂದ್ರಕುಮಾರ್, ಶ್ರೀ ಕೆ.ಎನ್. ರಾಜಣ್ಣ, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಶೇಖರಗೌಡ ಮಾಲೀಪಾಟೀಲ್ ಅವರುಗಳಿಗೆ 'ಸಹಕಾರಿ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಉದ್ಘಾಟನೆ



ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್
ಮಾನ್ಯ ಸಹಕಾರ ಸಚಿವರು

ಅಧ್ಯಕ್ಷತೆ



ಶ್ರೀ ಜಿ.ಟಿ.ದೇವೇಗೌಡ, ಶಾಸಕರು
ಹಾಗೂ ಅಧ್ಯಕ್ಷರು ಕ.ರಾ.ಸ.ಮ.ಬೆಂಗಳೂರು



ಶ್ರೀ ಗುರುನಾಥ ಜ್ಯಾಂತಿಕರ
ಅಧ್ಯಕ್ಷರು



ಶ್ರೀ ಹೆಚ್.ವಿ.ರಾಜೀವ
ಉಪಾಧ್ಯಕ್ಷರು

ಹಾಗೂ ಆಡಳಿತ ಮಂಡಳಿ ಸದಸ್ಯರು

## 60ನೇ ಅಖಿಲ ಭಾರತ ಸಹಕಾರ ಸಪ್ತಾಹ 2013



ಸಹಕಾರಿ ಸಂಬಂಧಿ ತೆರಿಗೆ ಮತ್ತು ಕಾಯ್ದೆ ದಿನಾಚರಣೆ

ದಿನಾಂಕ : 18-11-2013 ಸೋಮವಾರ, ಸ್ಥಳ : ಟಿ.ಚೆನ್ನಯ್ಯ ರಂಗಮಂದಿರ, ಕೋಲಾರ

ವಿಶೇಷ ಸಂಚಿಕೆ

ಅಧ್ಯಕ್ಷರ ಮಾತು



“ನಿರುದ್ಯೋಗ ನಿವಾರಣೆಗಾಗಿ, ಆಹಾರ ಉತ್ಪಾದನೆಗಾಗಿ, ಕೃಷಿಗೆ ಪೂರಕ ಉದ್ಯಮಗಳಾದ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಮೀನುಗಾರಿಕೆ, ಸಣ್ಣ ಹಾಗೂ ಬೃಹತ ಉದ್ದಿಮೆಗಳು, ರೇಷ್ಮೆ ಕೈಗಾರಿಕೆ, ಗುಡಿ ಕೈಗಾರಿಕೆ, ವಸತಿ ವ್ಯವಸ್ಥೆ, ಗ್ರಾಹಕ, ಮಾರಾಟ ಹಾಗೂ ಸಂಸ್ಕರಣ ಚ'ಟುವಟಿಕೆಗಳು, ಸಾರಿಗೆ, ಪ್ರವಾಸೋದ್ಯಮ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಪ್ರಕಟಣೆಗಳು, ಮುದ್ರಣ, ಆಧುನಿಕ ಮಾಹಿತಿ ತಂತ್ರಜ್ಞಾನ, ಪತ್ರಿಕೋದ್ಯಮ ಜಾಹೀರಾತು, ಸೇವಾ ಕ್ಷೇತ್ರಗಳು ಹೀಗೆ ಪ್ರತಿಯೊಂದು ಸ್ತರಗಳಲ್ಲಿ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುವ ಅಗತ್ಯ ಇದೆ.”

# ಸಹಕಾರ ಕ್ಷೇತ್ರದ ಬಲಸಂವರ್ಧನೆಗಾಗಿ ಸೌಹಾರ್ದ ಸಹಕಾರಿಗಳು

ದೇಶದ ಹಿರಿಯ ಸಹಕಾರಿಗಳ ಬಹುದಿನದ ಬೇಡಿಕೆ ಸಹಕಾರಿಗಳಿಗೆ ಸ್ವಾತಂತ್ರ. ಸಹಕಾರ ಚಳುವಳಿಯ ವಿಫಲತೆ ಸರಕಾರದ ವಿಪರೀತ ನಿಯಂತ್ರಣ. ಸಹಕಾರಿಗಳಿಗೆ ಸ್ವಾಯತ್ತತೆಯನ್ನು ನೀಡುವುದು ಸರಕಾರದ ಪಾತ್ರವನ್ನು ಕಡಿಮೆಗೊಳಿಸಿ ಸಹಕಾರಿಗಳಿಗೆ ವ್ಯವಹಾರಿಕ ಸ್ವಾತಂತ್ರವನ್ನು ಮತ್ತು ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಈ ದೇಶದ ಸಹಕಾರ ಚಳುವಳಿಯನ್ನು ಪುನರ್‌ಸಂಘಟಿಸುವ ನಿಟ್ಟಿನಲ್ಲಿ, ಯೋಜನಾ ಆಯೋಗದವರು ದೇಶದ ಎಲ್ಲ ರಾಜ್ಯಗಳಿಗೆ ನೀಡಿದ ಸೂಚನೆಯ ಹಿನ್ನೆಲೆಯಲ್ಲಿ ಕರ್ನಾಟಕ ಸರಕಾರ ಕೈಗೊಂಡ ಕ್ರಮವೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997. ಇದು 1–1–2001 ರಿಂದ ಜಾರಿಗೆ ಬಂದಿದೆ.

ಈ ಕಾಯ್ದೆಗನುಗುಣವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ರಚನೆಯಾಗಿದೆ. ಸೌಹಾರ್ದ ಸಹಕಾರಿ ಕ್ಷೇತ್ರದ ನೇತಾರನಾಗಿ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರದಲ್ಲಿ ಶಾಸನಬದ್ಧವಾಗಿ ರಚನೆಯಾಗಿ ಕಾರ್ಯನಿರ್ವಹಿಸುತ್ತಿರುವ ಏಕೈಕ ಸಹಕಾರಿ ಸಂಸ್ಥೆಯಾಗಿದೆ. ಇದು ಕರ್ನಾಟಕದ ಹೆಮ್ಮೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 12 ವರ್ಷಗಳು ಕಳೆದಿವೆ. ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂನಿಯಂತ್ರಣ ಧ್ಯೇಯದೊಂದಿಗೆ ಈ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಅವಧಿಯಲ್ಲಿ 2586ಕ್ಕಿಂತಲೂ ಹೆಚ್ಚು ವಿವಿಧ ರೀತಿಯ ಸೌಹಾರ್ದ ಸಹಕಾರಿಗಳು ನೊಂದಣೆಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 1959ರ ಕಾಯ್ದೆಯಿಂದ ಪರಿವರ್ತನೆಯಾಗಿರುವುದು 404 ಹೊಸದಾಗಿ ನೋಂದಣೆಯಾಗಿರುವುದು 2182.

ರಾಜ್ಯದ ಹಿರಿಯ ಸಹಕಾರಿಗಳ ಕನಸನ್ನು ಸಾಕಾರಗೊಳಿಸುವಲ್ಲಿ, ಸಫಲತೆಯನ್ನು ಕಾಣುತ್ತ, ಈ ಕ್ಷೇತ್ರ ಮುನ್ನಡೆದಿದೆ. ಸಹಕಾರಿ ಕ್ಷೇತ್ರಕ್ಕೆ ಬಲತಂದುಕೊಟ್ಟಿದೆ ಎಂದು ಸಹಕಾರಿ ಗಣ್ಯರು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ. ಸರಕಾರದಲ್ಲಿಯೂ ಸಹ ಈ ಕ್ಷೇತ್ರದ ಕಾರ್ಯನಿರ್ವಹಣೆಗೆ ಉತ್ತಮ ಪ್ರತಿಕೀಯೆ ಬಂದಿದೆ.

ಸೌಹಾರ್ದ ಸಹಕಾರಿ ಸಂಸ್ಥೆಗಳು ಸಾಂಪ್ರದಾಯಿಕ ಲೇವಾದೇವಿ ವ್ಯವಹಾರಗಳ ಜೊತೆಗೆ ಸದಸ್ಯರಿಗೆ ಬಹುಮುಖ ಸೇವೆಗಳನ್ನು ಒದಗಿಸುತ್ತಿರುವುದು ವಿಶೇಷ. ನೂತನ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಆಧುನಿಕತೆಯಿಂದ ಕಾರ್ಯನಿರ್ವಹಿಸುತ್ತಿರುವುದು ಮತ್ತೊಂದು ವಿಶೇಷ. ಯಾವುದೆ ಸಹಕಾರಿ ಬ್ಯಾಂಕು ಅಥವಾ ಸಹಕಾರಿ ಸಂಸ್ಥೆಗಳು ಕಳೆದ 100 ವರ್ಷಗಳಲ್ಲಿ ಸಾಧಿಸದಿರುವುನಗನು ಈ ಕ್ಷೇತ್ರದ ಸಹಕಾರಿ ಸಂಸ್ಥೆಗಳು ಸಾಧಿಸಿವೆ.ಅನೇಕ ಬಡ್ಡಿಯೇತರ ಆದಾಯಗಳನ್ನು ಮಾಡುತ್ತ ಹೊಸ ಹೊಸ ಆಯಾಮಗಳನ್ನು ಅಳವಡಿಸಿ ಹೆಚ್ಚು ಜನಪ್ರೀಯತೆಯನ್ನು ಸಾಧಿಸಿವೆ. ಗುಣಮಟ್ಟವನ್ನು ಕಾಯ್ದುಕೊಂಡಿವೆ. ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯಿಂದ 1959ರ ಕಾಯ್ದೆಯಲ್ಲಿನ ಅನೇಕ ಸಹಕಾರಿ ಸಂಸ್ಥೆಗಳು ಉತ್ತೇಜಿತವಾಗಿವೆ. ಬಹು ವಿಧ ಹಾಗು ಉತ್ತಮ ಕಾರ್ಯನಿರ್ವಹಣೆಗೆ ಪ್ರೇರಕವಾಗಿವೆ.

ನವಯುಗದ ಯುವ ಪಿಳಿಗೆಯು ಈ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಹೆಚ್ಚು ಆಕರ್ಷಿತವಾಗಿರುವುದು ಮತ್ತೂಂದು ಪ್ರಮುಖ ವಿದ್ಯಮಾನವೆನಿಸಿದೆ.

ಈ ಕ್ಷೇತ್ರದಲ್ಲಿ 4,250 ಕೋಟಿ ರೂಗಳ ಶೇರು ಬಂಡವಾಳವಿದೆ. 8,000 ಕೋಟಿ ರೂಗಳ ಠೇವಣಿ ಇದೆ. 6500 ಕೋಟಿ ರೂಗಳಸಾಲ ನೀಡಿದೆ. 9250 ಕೋಟಿ ರೂಗಳ ದುಡಿಯುವ ಬಂಡವಾಳವಿದೆ. 1.8 ಲಕ್ಷ ಸದಸ್ಯರಿದ್ದಾರೆ. 20,000 ಜನರಿಗೆ ನೇರವಾಗಿ ಹಾಗೂ 17000 ಜನರಿಗೆ ಪೂರಕ ಉದ್ಯೋಗ ಒದಗಿಸಿದೆ. ಶೇಕಡಾ 80% ಸಹಕಾರಿ ಸಂಸ್ಥೆಗಳು ಲಾಭದಲ್ಲಿವೆ. ಸಹಕಾರಿ ಕ್ಷೇತ್ರದ ಗುಣಮಟ್ಟ ಹಾಗೂ ಬಲಸಂವರ್ಧನೆಗೆ ಕಾರಣವಾಗಿವೆ.

ಸೌಹಾರ್ದ ಸಹಕಾರಿ ಕ್ಷೇತ್ರ ಬೆಳವಣಿಗೆಗೆ ಈ ಕ್ಷೇತ್ರದ ಎಲ್ಲ ಸಹಕಾರಿಗಳು ಸಹಕಾರಿ ಇಲಾಖೆ ನೀಡುತ್ತಿರುವ ಪ್ರೋತ್ಸಾಹ ಮುಂದುವರೆಯುವುದು ಅಪೇಕ್ಷಣೀಯ. ನಮ್ಮ ರಾಜ್ಯದಲ್ಲಿ ಸಹಕಾರಿ ಕಾಯ್ದೆಗಳು ಎರಡು ಇವೆ ಆದರೆ ಸಹಕಾರಿಗಳಾಗಿರುವ ನಾವುಗಳೆಲ್ಲ ಒಂದೇ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ನಕಾರಾತ್ಮಕ ಭಾವನೆಗಳೇನಾದರೂ ಇದ್ದಲ್ಲಿ ಅವುಗಳನ್ನು ಬಿಟ್ಟು ಸಕಾರಾತ್ಮಕ ಭಾವನೆಗಳನ್ನು ಬೆಳೆಸಿಕೊಂಡು ಈ ಕ್ಷೇತ್ರದ ಬೆಳವಣಿಗೆಗೆ ಸರ್ವವಿಧದಿಂದಲೂ ಪ್ರೋತ್ಸಾಹಿಸುವುರ ಬಗ್ಗೆ ಈ 60ನೇ ಸಹಕಾರ ಸಪ್ತಾಹದ ಆಚರಣೆ ನಾಂದಿಯಾಗಲಿ. ಎಲ್ಲರಿಗೂ ಸಪ್ತಾಹದ ಶುಭ ಹಾರೈಕೆಗಳು.

**ಗುರುನಾಥ ಜ್ಯಾಂತಿಕರ**
ಅಧ್ಯಕ್ಷರು

# ಸಹಕಾರಿಗಳಿಗೆ ಅನ್ವಯವಾಗುವಂತೆ ವಿವಿಧ ತೆರಿಗೆ ಕಾಯ್ದೆಗಳು

### ಆದಾಯತೆರಿಗೆ ಕಾಯ್ದೆ – 1962

**1. ಸಹಕಾರಿಗಳಿಗೆ ಆದಾಯ ತೆರಿಗೆ ಕಾಯ್ದೆ ಅನ್ವಯವಾಗುತ್ತದೆಯೆ?**

- ಆದಾಯ ತೆರಿಗೆ ಕಾಯ್ದೆಯ ಪ್ರಕರಣ 2 ಕಲಂ 19ರ ಪ್ರಕಾರ ಸಹಕಾರ ಸಂಸ್ಥೆಗಳು ಎಂದರೆ 1912ರ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ಅಥವಾ ಯಾವುದೇ ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳನ್ನು ನೋಂದಾಯಿಸಲು ಇರುವ ಯಾವುದೇ ಸಹಕಾರಿ ಕಾಯ್ದೆಯ ಅಡಿಯಲ್ಲಿ ನೋಂದಣಿ ಪಡೆದ ಸಂಸ್ಥೆ.
- ಆದಾಯ ತೆರಿಗೆ ಕಾಯ್ದೆಯ ಪ್ರಕರಣ 4ರ ಪ್ರಕಾರ ಯಾವುದೇ ಕರನಿರ್ಧರಣಾ ವರ್ಷದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಹಿಂದಿನ ವರ್ಷದ ಒಟ್ಟು ತೆರಿಗೆದಾಯಕ ಆದಾಯದ ಮೇಲೆ ತೆರಿಗೆಯನ್ನು ಆಕರಿಸಲಾಗುತ್ತದೆ. ಅಂದರೆ "ವ್ಯಕ್ತಿ"ಯ ಪರಿಭಾಷೆಯಡಿಯಲ್ಲಿ ಬರುವವರು ಮಾತ್ರ ಆದಾಯ ತೆರಿಗೆ ಪಾವತಿಸಬೇಕಾಗಿರುತ್ತದೆ.

> ಸಪ್ತಾಹದ ಅಂಗವಾಗಿ
> ವಿಶೇಷ ಲೇಖನ
> ▸▸ ಬಿ.ವಿ.ರವೀಂದ್ರನಾಥ್

- ಕಾಯ್ದೆಯ ಪ್ರಕರಣ 2 ಕಲಂ 31ರ ಪ್ರಕಾರ "ವ್ಯಕ್ತಿ" ಎಂದರೆ
- ನೈಸರ್ಗಿಕ ವ್ಯಕ್ತಿ, ಹಿಂದೂ ಅವಿಭಕ್ತ ಕುಟುಂಬ, ಕಂಪನಿ, ಪಾಲುದಾರಿಕಾ ಸಂಸ್ಥೆ
- ನಿಯೋಜಿತ ಯಾ ಅನಿಯೋಜಿತ ಸಂಘ ಯಾ ಸಂಸ್ಥೆ ಯಾ ಒಕ್ಕೂಟ, ಸ್ಥಳೀಯ ಪ್ರಾಧಿಕಾರ
- ಮೇಲಿನವುಗಳಿಗೆ ಒಳಪಡದ ಇತರೆ ಕೃತಕ ನ್ಯಾಯಿಕ ಪ್ರಾಧಿಕಾರಗಳು.

**2. ಆದಾಯದ ಗಣನೆ ಮತ್ತು ಆದಾಯ ವಿವರ ಸಲ್ಲಿಸುವಿಕೆ :**

- ನ್ಯಾಯಾಲಯದ ಒಂದು ಪ್ರಮುಖ ನಿರ್ಣಯದಂತೆ ಸಹಕಾರ ಸಂಸ್ಥೆಗಳು ನಿಯೋಜಿತ ಸಂಘ ಸಂಸ್ಥೆಗಳು ಎಂದು ಪರಿಗಣಿಸಲ್ಪಡುತ್ತವೆ. ಆದ್ದರಿಂದ ಸಹಕಾರ ಸಂಸ್ಥೆಗಳು ಆರ್ಥಿಕ ವರ್ಷದಲ್ಲಿ ಗಳಿಸಿದ ಒಟ್ಟು ಆದಾಯದ ಮೇಲೆ ತೆರಿಗೆ ಬಾಧ್ಯತೆ ಇರುತ್ತದೆ.
- ಆದಾಯ ತೆರಿಗೆ ಕಾಯ್ದೆಯ ಪ್ರಕರಣ 80ಕಅನ್ವಯ ಸಹಕಾರ ಸಂಸ್ಥೆಗಳ ನಿರ್ದಿಷ್ಟ ಆದಾಯಗಳಿಗೆ ಸಂಪೂರ್ಣ ಕಡಿತಗಳಿರುವುದು ನಿಜವಾದರೂ ಸಹಕಾರ ಸಂಸ್ಥೆಗಳು ಬೇರೆ ಬೇರೆ ಮೂಲಗಳಿಂದ ಗಳಿಸಿದ ಆದಾಯಗಳನ್ನು ಆದಾಯ ತೆರಿಗೆ ಉಪಬಂಧಗಳ ಅನ್ವಯ ಸೂಕ್ತವಾಗಿ ಗಣನೆ ಮಾಡಬೇಕು.
- ಇಲ್ಲಿ ನಾವು ವಿನಾಯಿತಿ ಮತ್ತು ಕಡಿತ ಎಂಬ ಪದಗಳ ವ್ಯತ್ಯಾಸಗಳನ್ನು ಗಮನಿಸಬೇಕು. ವಿನಾಯಿತಿಗೊಳಗಾದ ಆದಾಯವು ಒಟ್ಟು ವರಮಾನದ ಗಣನೆಯ ಪರಿಮಿತಿಗೆ ಒಳಪಡುವುದಿಲ್ಲ. ಕಾಯ್ದೆಯ 3ನೇ ಅಧ್ಯಾಯವು ಅಂತಹ ಆದಾಯದ ಬಗ್ಗೆ ತಿಳಿಸುತ್ತದೆ. ಕಾಯ್ದೆಯ ಅಧ್ಯಾಯ 6ಎ ಆದಾಯ ಗಣನೆಯ ಸಂದರ್ಭದಲ್ಲಿ



**ಶ್ರೀ ಬಿ.ವಿ.ರವೀಂದ್ರನಾಥ್**

ಚಾರ್ಟರ್ಡ್ ಅಕೌಂಟೆಂಟ್ ಜಿ.ಪಿ.ರಸ್ತೆ, ಸಾಗರ ಶಿವಮೊಗ್ಗ ಜಿಲ್ಲೆ. 08183 226696 - 98454 60896, bvrnath@gmail.com

ಶ್ರೀಯುತ ಬಿ.ವಿ.ರವೀಂದ್ರನಾಥ್ ಇವರು ಶಿವಮೊಗ್ಗ ಜಿಲ್ಲೆಯ ಸಾಗರ ದವರು. ಕಳೆದ 24 ವರ್ಷಗಳಿಂದ (ಚಾರ್ಟರ್ಡ್ ಅಕೌಂಟೆಂಟ್) ವೃತ್ತಿ ಯಲ್ಲಿ ಸಂಪೂರ್ಣವಾಗಿ ತೊಡಗಿಸಿ ಕೊಂಡಿರುತ್ತಾರೆ.

ಕಳೆದ ಹತ್ತು ವರ್ಷಗಳಿಂದ ಕರ್ನಾಟಕ ರಾಜ್ಯಾದ್ಯಂತ ಸುಮಾರು ನೂರಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳಿಗೆ ಸಲಹೆಗಾರರಾಗಿ, ಲೆಕ್ಕಪರಿಶೋಧಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರ ಕಛೇರಿಯು ಅತ್ಯಾಧುನಿಕ ಸೌಲಭ್ಯಗಳಾದ ಸಿಸಿಟಿವಿ, ಇಂಟರ್ ನೆಟ್ ಒಳಗೊಂಡಂತೆ ಸಂಪೂರ್ಣ ಗಣಕೀಕೃತವಾಗಿರುತ್ತದೆ. ಇವರ ಕಛೇರಿಯಲ್ಲಿ ಸುಮಾರು 25ಕ್ಕೂ ಹೆಚ್ಚು ಅನುಭವೀ ಪದವೀಧರ ಸಿಬ್ಬಂದಿಗಳಿದ್ದಾರೆ. ಕರ್ನಾಟಕದಾದ್ಯಂತ ಸುಮಾರು 19 ಜಿಲ್ಲೆಗಳಲ್ಲಿ ಕಕ್ಷಿದಾರರನ್ನು ಹೊಂದಿದ್ದಾರೆ. ಕರ್ನಾಟಕದಾದ್ಯಂತ ಸುಮಾರು 300ಕ್ಕೂ ಹೆಚ್ಚು ಸಹಕಾರೇತರ ಸಂಸ್ಥೆಗಳಿಗೆ (NGO) ಲೆಕ್ಕಪರಿ ಶೋಧಕನಾಗಿ, ಸಲಹೆಗಾರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪರಿಗಣಿಸಬೇಕಾದ ಕಡಿತಗಳ ಬಗ್ಗೆ ವಿವರಗಳನ್ನು ಒದಗಿಸುತ್ತದೆ.

- ಕಾಯ್ದೆಯ ಪ್ರಕರಣ 80ಬಿ ಯ ಕಲಂ 5ರ ಪ್ರಕಾರ ಒಟ್ಟು ವರಮಾನ ಎಂದರೆ ಕಾಯ್ದೆಯ ಪ್ರಕಾರ ಗಣನೆ ಮಾಡಿದ, ಅಧ್ಯಾಯ 6ಎ ಅಡಿಯಲ್ಲಿ ಕಡಿತಗಳಿಗೊಳಪಡದ, ಎಲ್ಲಾ ಮೂಲಗಳಿಂದ ಗಳಿಸಿದ ಒಟ್ಟು ಆದಾಯ.
- ಇದರಿಂದ ಸಹಕಾರ ಸಂಸ್ಥೆಗಳು ತನ್ನ ವಿವಿಧ ಮೂಲಗಳಿಂದ ಗಳಿಸಿದ ಆದಾಯದಲ್ಲಿ ನಿರ್ದಿಷ್ಟವಾದ ಕೆಲವು ಕಡಿತಗಳನ್ನು ಮಾಡಬಹುದೇ ಹೊರತು ಯಾವುದೇ ಆದಾಯಗಳಿಗೆ ವಿನಾಯಿತಿ ಇರುವುದಿಲ್ಲ ಎಂಬುದು ಅರಿವಾಗುತ್ತದೆ.
- ಹಾಗಾಗಿ ಪ್ರತಿಯೊಂದು ಸಹಕಾರ ಸಂಸ್ಥೆಯೂ ತನ್ನ ವಿವಿಧ ಮೂಲಗಳ ಆದಾಯವನ್ನು ಕಾಯ್ದೆಯ ಕಲಂಗಳಿಗನು ಗುಣವಾಗಿ ಸೂಕ್ತವಾಗಿ ಪರಿಗಣಿಸಿ ಲೆಕ್ಕಹಾಕಬೇಕು ಮತ್ತು ಕಾಯ್ದೆಯ 139(1)ನೇ ಪ್ರಕರಣದನ್ವಯ ನಿರ್ದಿಷ್ಟ ದಿನಾಂಕದೊಳಗಾಗಿ ಆದಾಯ ವಿವರವನ್ನು ಸಂಬಂಧಿಸಿದ ಆದಾಯ ತೆರಿಗೆ ಕಛೇರಿಗೆ ಸಲ್ಲಿಸಬೇಕು.

**3. ಪ್ರಕರಣ 44 ಎಬಿ : ಲೆಕ್ಕಪರಿಶೋಧನೆ :**

- ಪತ್ತಿನ ವ್ಯವಹಾರ ನಡೆಸುವ ಸಹಕಾರ ಸಂಸ್ಥೆಗಳ ವಾರ್ಷಿಕ ಒಟ್ಟು ಜಮಾ ಒಂದು ಕೋಟಿ ರೂ.ಗಳನ್ನು ಮೀರಿದಲ್ಲಿ ಅಂತಹ ಸಂಸ್ಥೆಗಳು ತಮ್ಮ ಲೆಕ್ಕಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆದಾಯ ತೆರಿಗೆ ಕಾಯ್ದೆ ಪ್ರಕರಣ 44AB ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿಸಬೇಕು.

**4. ಕಾಯ್ದೆ ಪ್ರಕರಣ 139(1) :**

- 139(1)ರಲ್ಲಿ ತಿಳಿಸಿದಂತೆ ನಿಗದಿತ ಅವಧಿಯೊಳಗಾಗಿ ಆದಾಯ ತೆರಿಗೆ ವಿವರಗಳನ್ನು ತೆರಿಗೆ ಇಲಾಖೆಗೆ ಸಲ್ಲಿಸತಕ್ಕದ್ದು. ಇದರ ಪ್ರಕಾರ

ಲೆಕ್ಕಪರಿಶೋಧನೆ ಅಗತ್ಯವಿಲ್ಲದ ಸಂಸ್ಥೆಗಳು – ಸಂಬಂಧಪಟ್ಟ ಕರನಿರ್ಧರಣಾ ವರ್ಷದ ಜುಲೈ 31ರ ಒಳಗೆ ರಿಟರ್ನ್ ಸಲ್ಲಿಸಬೇಕು.

ಲೆಕ್ಕಪರಿಶೋಧನೆ ಅವಶ್ಯವಿರುವ ಸಂಸ್ಥೆಗಳು–ಸಂಬಂಧಪಟ್ಟ ಕರನಿರ್ಧರಣಾವರ್ಷದ ಸೆಪ್ಟೆಂಬರ್ 30ರೊಳಗೆ ರಿಟರ್ನ್ ಸಲ್ಲಿಸಬೇಕು.

**5. ಕಾಯ್ದೆ ಪ್ರಕರಣ 80P(2) :**

- ಪ್ರಕರಣ 80P(2)ರಡಿಯಲ್ಲಿ ತಿಳಿಸಿದ ವ್ಯವಹಾರಗಳನ್ನು ನಡೆಸುತ್ತಿರುವ ಸಹಕಾರ ಸಂಸ್ಥೆಗಳು ಸದರಿ ಪ್ರಕರಣ 80ಕ(2)ರಡಿಯಲ್ಲಿ ತಿಳಿಸಿದ ವ್ಯವಹಾರಗಳಿಂದ ಬಂದ ಆದಾಯಗಳಿಗೆ ಆಯಾ ಕಲಂಗಳಲ್ಲಿ ಸೂಚಿಸಿದಂತೆ ಕಡಿತಕ್ಕೆ ಅರ್ಹವಾಗುವುದು.

**6. ಕಾಯ್ದೆ ಪ್ರಕರಣ 80P(2(a)(i)) :**

- ಬ್ಯಾಂಕಿಂಗ್ ವ್ಯವಹಾರ ನಡೆಸುತ್ತಿರುವ ಯಾ ಸದಸ್ಯರಿಗೆ ಸಾಲ ಸೌಲಭ್ಯ ನೀಡುತ್ತಿರುವ ಸಹಕಾರ ಸಂಸ್ಥೆಗಳಿಗೆ ತನ್ನ ಸದಸ್ಯರೊಂದಿಗೆ ನಡೆಸಿದ ವ್ಯವಹಾರದಿಂದ ಬಂದ ಸಂಪೂರ್ಣ ಆದಾಯಕ್ಕೆ ಪ್ರಕರಣ 80ಕ(2(ಚಿ)(೧))ರಲ್ಲಿ ಕಡಿತಗಳನ್ನು ನೀಡಲಾಗಿದೆ. ಆದರೆ ಕಾಯ್ದೆಯಲ್ಲಿ ಬ್ಯಾಂಕಿಂಗ್ ಎಂಬ ಪದಕ್ಕೆ ಪರಿಭಾಷೆಯನ್ನು ನೀಡಿರುವುದಿಲ್ಲ.
- ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 1949ರಡಿಯಲ್ಲಿ ಬ್ಯಾಂಕಿಂಗ್ ಎಂದರೆ "ಸಾಲ ನೀಡುವ ಮತ್ತು ನಿಯೋಜಿಸುವ ಸಲುವಾಗಿ ಸಾರ್ವಜನಿಕರಿಂದ ಕೇಳಿದಾಗ ಹಿಂದಿರುಗಿಸುವ ಅಥವಾ ಚೆಕ್ ಯಾ ಡ್ರಾಫ್ಟ್ ಮೂಲಕ ಹಿಂಪಡೆಯುವ ಸೌಲಭ್ಯ ಒದಗಿಸಿ ಹಣವನ್ನು ಠೇವಣಿಯಾಗಿ ಸ್ವೀಕರಿಸುವುದು" ಎಂದಿದೆ. ಆದ್ದರಿಂದ ಈ ವ್ಯವಹಾರಗಳಿಂದ ಬಂದ ಆದಾಯವು ಸದರಿ ಪ್ರಕರಣ 80ಕ(2) ರಡಿಯಲ್ಲಿ ಕಡಿತಕ್ಕೆ ಅರ್ಹವಾಗುವುದು.

**7. ಕಾಯ್ದೆ ಪ್ರಕರಣ 80P(2(c)) :**

- ಪ್ರಕರಣ 80P(2(a))ಯಾ (b)ನಲ್ಲಿ ಹೇಳಿದ ವ್ಯವಹಾರಗಳಿಗೆ ಹೊರತಾಗಿ ಬೇರೆ ಯಾವುದೇ ವ್ಯವಹಾರ ನಡೆಸುತ್ತಿರುವ ಸಹಕಾರ ಸಂಸ್ಥೆಗಳಿಗೆ ಸದರಿ ವ್ಯವಹಾರದಿಂದ ಬಂದ ಆದಾಯದಲ್ಲಿ ಪ್ರಕರಣ 80P(2(c))ರನ್ವಯ ಐವತ್ತು ಸಾವಿರ ರೂಗಳ ಕಡಿತಗಳನ್ನು ನೀಡಲಾಗಿದೆ.
- ಬಳಕೆದಾರರ ಸಹಕಾರ ಸಂಸ್ಥೆಗಳು ಪ್ರಕರಣ 80P(2(a))ಯಾ (b) ನಲ್ಲಿ ಹೇಳಿದ ವ್ಯವಹಾರಗಳಿಗೆ ಹೊರತಾದ ಬೇರೆ ಯಾವುದೇ ವ್ಯವಹಾರದಿಂದ ಬಂದ ಆದಾಯದಲ್ಲಿ ಪ್ರಕರಣ 80P(2(c)(i)) ರನ್ವಯ ಒಂದು ಲಕ್ಷ ರೂಗಳ ಕಡಿತಗಳಿಗೆ ಅರ್ಹರಾಗಿರುತ್ತವೆ.

**8. ಕಾಯ್ದೆ ಪ್ರಕರಣ 80P (2(d)**

- ಪ್ರಕರಣ 80ಕ(2(ಜ))ನಲ್ಲಿ ಸಹಕಾರಿ ಸಂಸ್ಥೆಗಳು ಬೇರೊಂದು ಸಹಕಾರಿ ಸಂಸ್ಥೆಗಳಲ್ಲಿ ಮಾಡಿದ ಹೂಡಿಕೆಗಳ ಮೇಲೆ ಬಂದ ಆದಾಯದ ಮೇಲೆ ಸಂಪೂರ್ಣ ಕಡಿತವನ್ನು ನೀಡಲಾಗಿದೆ.

**9. ಕಾಯ್ದೆ ಪ್ರಕರಣ 40 :**

- ಸದ್ರಿ ಕಲಂನನ್ವಯ ಕೆಲವು ಖರ್ಚುಗಳು ಆದಾಯ ಕಾಯ್ದೆಯ ಅಡಿಯಲ್ಲಿ ಕಳೆಯಲು ಅನರ್ಹವಾಗಿರುತ್ತವೆ. ಅವುಗಳೆಂದರೆ:
- ಆದಾಯ ತೆರಿಗೆ, ಕೊಸರು ಭತ್ಯೆ ತೆರಿಗೆ ಮುಂತಾದ ತೆರಿಗೆಗಳು.
- ರಿಟರ್ನ್ ಸಲ್ಲಿಸುವ ಮೊದಲು ಪಾವತಿಸದ ಶಾಸನಬದ್ಧ ಖರ್ಚುಗಳು (PF, ST, PT, Bonus, Bank Interest, etc.,)
- ಮೂಲದಲ್ಲಿ ತೆರಿಗೆ ಕಡಿತ ಮಾಡಬೇಕಾದ ಖರ್ಚುಗಳನ್ನು ತೆರಿಗೆ ಕಡಿತ ಮಾಡದೇ ಪಾವತಿಸಿದರೆ ಅಂತಹ ಖರ್ಚುಗಳು.
- ಹಿಂದಿನ ಸಾಲುಗಳಲ್ಲಿ ಆಕರಣೆ ಪದ್ಧತಿಯಲ್ಲಿ ಪರಿಗಣಿಸಿದ ಖರ್ಚುಗಳು ಸದರಿ ಸಾಲಿನಲ್ಲಿ ಪಾವತಿಯಾಗಿದ್ದರೆ.

**10. ಕಾಯ್ದೆ ಪ್ರಕರಣ 40A(3) :**

- ಯಾವುದೇ ಒಂದು ದಿನದಲ್ಲಿ ರೂ.20,000ಗೆ ಮೀರಿ ಯಾವುದೇ ಖರ್ಚನ್ನು ಕ್ರಾಸ್ ಮಾಡಿದ ಚೆಕ್ ಅಥವಾ ಬ್ಯಾಂಕ್ ಡ್ರಾಫ್ಟ್

ಹೊರತಾಗಿ ಪಾವತಿಸಿದರೆ ಅಂತಹ ಖರ್ಚುಗಳು ಆದಾಯ ಕಾಯ್ದೆಯ ಅಡಿಯಲ್ಲಿ ಕಳೆಯಲು ಅನರ್ಹವಾಗುವುದು.

**11. ಕಾಯ್ದೆ ಪ್ರಕರಣ 139A :**

- ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಸೂಕ್ತ ಪ್ರಾಧಿಕಾರಕ್ಕೆ ನಮೂನೆ 49 ಎ ನಲ್ಲಿ ಅರ್ಜಿ ಸಲ್ಲಿಸುವುದರ ಮೂಲಕ ಖಾಯಂ ನೋಂದಣಿ ಸಂಖ್ಯೆಯನ್ನು (PAN) ಪಡೆಯತಕ್ಕದ್ದು ಮತ್ತು ಆದಾಯ ತೆರಿಗೆ ಪಾವತಿಸುವ ಎಲ್ಲ ಚಲನ್‌ಗಳಲ್ಲಿ ಮತ್ತು ವಾರ್ಷಿಕ ಆದಾಯ ತೆರಿಗೆ ವಿವರ ಸಲ್ಲಿಸುವಾಗ ಈ ಖಾಯಂ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

**12. ಕಾಯ್ದೆ ಪ್ರಕರಣ 269SS :**

- ಯಾವುದೇ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಇನ್ಯಾವುದೇ ವ್ಯಕ್ತಿಯಿಂದ 20,000 ರೂಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ಬ್ಯಾಂಕಿನ ಖಾತೆಗೆ ಸಲ್ಲುವ ಚೆಕ್ ಅಥವಾ ಬ್ಯಾಂಕಿನ ಖಾತೆಗೆ ಸಲ್ಲುವ ಡ್ರಾಫ್ಟ್‌ಗಳಲ್ಲದೆ ಬೇರೆ ರೂಪದಲ್ಲಿ ಸ್ವೀಕರಿಸುವಂತಿಲ್ಲ.

**13. ಕಾಯ್ದೆ ಪ್ರಕರಣ 269T :**

- ಯಾವುದೇ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಇನ್ಯಾವುದೇ ವ್ಯಕ್ತಿಗೆ 20,000 ರೂಗಳಿಗೆ ಮೀರಿದ ಸಾಲ ಅಥವಾ ಠೇವಣಿಯನ್ನು ಬ್ಯಾಂಕಿನ ಖಾತೆಗೆ ಸಲ್ಲುವ ಚೆಕ್ ಅಥವಾ ಬ್ಯಾಂಕಿನ ಖಾತೆಗೆ ಸಲ್ಲುವ ಡ್ರಾಫ್ಟ್‌ಗಳಲ್ಲದೆ ಬೇರೆ ರೂಪದಲ್ಲಿ ಮರುಪಾವತಿ ಮಾಡುವಂತಿಲ್ಲ

**14. ಕಾಯ್ದೆ ಪ್ರಕರಣ 271D :**

- ಯಾವುದೇ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಕಾಯ್ದೆ ಪ್ರಕರಣ 269(SS)ನ ಉಲ್ಲಂಘಿಸಿ ಯಾವುದೇ ಸಾಲ ಅಥವಾ ಠೇವಣಿಯನ್ನು ಸ್ವೀಕರಿಸಿದಲ್ಲಿ ಸದರಿ ಸಾಲ ಯಾ ಠೇವಣಿಯ ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡವಾಗಿ ಪಾವತಿಸತಕ್ಕದ್ದು

**15. ಕಾಯ್ದೆ ಪ್ರಕರಣ 271E :**

- ಯಾವುದೇ ವ್ಯಕ್ತಿಯು ತನ್ನ ವ್ಯವಹಾರದಲ್ಲಿ ಕಾಯ್ದೆ ಪ್ರಕರಣ 269Tನ ಉಲ್ಲಂಘಿಸಿ ಯಾವುದೇ ಸಾಲ ಅಥವಾ ಠೇವಣಿಯನ್ನು ಮರುಪಾವತಿ ಮಾಡಿದಲ್ಲಿ ಸದರಿ ಮರುಪಾವತಿ ಮಾಡಿದ ಸಾಲ ಯಾ ಠೇವಣಿಯ ಮೊತ್ತಕ್ಕೆ ಸಮನಾದ ಮೊತ್ತವನ್ನು ದಂಡವಾಗಿ ಪಾವತಿಸತಕ್ಕದ್ದು.

**16. ವಿನಾಯಿತಿ :**

- ಪ್ರಕರಣ 269SS ಮತ್ತು 269T ಈ ಕೆಳಗಿನವರೊಂದಿಗಿನ ವ್ಯವಹಾರಗಳಿಗೆ ಅನ್ವಯಿಸುವುದಿಲ್ಲ: (ಅ) ರಾಜ್ಯ ಮತ್ತು ಕೇಂದ್ರ ಸರ್ಕಾರ (ಆ) ವಾಣಿಜ್ಯ, ರಾಷ್ಟ್ರೀಕೃತ, ಸಹಕಾರಿ ಬ್ಯಾಂಕುಗಳು, ಅಂಚೆ ಕಛೇರಿಗಳು (ಇ) ಕೇಂದ್ರ ಯಾ ಪ್ರಾಂತೀಯ ಕಾಯ್ದೆಗಳಿಂದ ರಚನೆಗೊಂಡ ಸಂಸ್ಥೆಗಳು.

**17. ಮೂಲದಲ್ಲಿ ತೆರಿಗೆ ಕಡಿತ : (TDS)**

**ಪ್ರಕರಣ 192 : ವೇತನ :**

- ಪ್ರತಿಯೊಂದು ಸಹಕಾರಿ ಸಂಸ್ಥೆಯೂ ತನ್ನ ಸಿಬ್ಬಂದಿಗಳಿಗೆ ನೀಡುವ ವೇತನದಲ್ಲಿ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡತಕ್ಕದ್ದು. ಆದರೆ ಯಾವುದೇ ಸಿಬ್ಬಂದಿಯ ವೇತನವು ಕಾಯ್ದೆಯ ನಿಯಮಗಳಂತೆ ವಿನಾಯಿತಿಗಳು, ಕಡಿತಗಳು, ಮತ್ತು ರಿಯಾಯಿತಿಗಳನ್ನು ಪರಿಗಣಿಸಿ ಗಣನೆ ಮಾಡಿದಾಗ ತೆರಿಗೆದಾಯಕ ಕನಿಷ್ಠ ಮಿತಿಗಿಂತ ಕಡಿಮೆಯಿದ್ದರೆ ಅಂತಹ ವೇತನದಲ್ಲಿ ತೆರಿಗೆ ಕಡಿತ ಮಾಡುವ ಅಗತ್ಯವಿಲ್ಲ. ತೆರಿಗೆಯನ್ನು ವೇತನದಲ್ಲಿ ಕಡಿತಗೊಳಿಸಿದ ಸಂದರ್ಭದಲ್ಲಿ ನೌಕರನಿಗೆ ನಮೂನೆ 16ರಲ್ಲಿ ಪ್ರಮಾಣ ಪತ್ರ ನೀಡಬೇಕು.

**ಪ್ರಕರಣ 194 ಎ: ಬಡ್ಡಿ :**

- ಪ್ರತಿಯೊಂದು ಸಹಕಾರಿ ಸಂಸ್ಥೆಯೂ ಭದ್ರತಾ ಠೇವಣಿ ಹೊರತು ಪಡಿಸಿದಂತೆ ಯಾವುದೇ ಗ್ರಾಹಕನು ತನ್ನಲ್ಲಿ ಇಟ್ಟಿರುವ ಠೇವಣಿಗಳ ಮೇಲೆ ನೀಡುವ ಬಡ್ಡಿಯು ಒಂದು ಆರ್ಥಿಕ ವರ್ಷದಲ್ಲಿ 5,000–00 ರೂ.ಗಳಿಗೆ ಮೀರಿದಲ್ಲಿ ಅಂತಹ ಬಡ್ಡಿಯ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.
- ಯಾವುದೇ ಸಹಕಾರ ಸಂಸ್ಥೆಯ ಅರ್ಹ ಸದಸ್ಯನು ಆ ಸಹಕಾರ ಸಂಸ್ಥೆಯಲ್ಲಿ ತಾನು ಹೊಂದಿದ ಯಾವುದೇ ಠೇವಣಿಯ ಮೇಲೆ ಎಷ್ಟೇ ಮೊತ್ತದ ಬಡ್ಡಿ ಬಂದಿರಲಿ ಅದನ್ನು ಪ್ರಕರಣ 194 ಎ ರಡಿಯಲ್ಲಿ ಆದಾಯ ತೆರಿಗೆ ಕಡಿತವಿಲ್ಲದೆ ಸ್ವೀಕರಿಸಲು ಅರ್ಹನಾಗಿರುತ್ತಾನೆ.
- ಸದಸ್ಯನಲ್ಲದ ಠೇವಣಿದಾರನು ಸೂಕ್ತ ನಮೂನೆಗಳಲ್ಲಿ ಘೋಷಣೆಗಳನ್ನು ಸಲ್ಲಿಸಿದಲ್ಲಿ ತಾನು ಹೊಂದಿದ ಠೇವಣಿಗಳ ಮೇಲೆ ಎಷ್ಟೇ ಮೊತ್ತದ ಬಡ್ಡಿ ಬಂದಿರಲಿ ಅದನ್ನು ಪ್ರಕರಣ 194(ಎ) ರಡಿಯಲ್ಲಿ ಆದಾಯ ತೆರಿಗೆ ಕಡಿತವಿಲ್ಲದೆ ಸ್ವೀಕರಿಸಲು ಅರ್ಹನಾಗಿರುತ್ತಾನೆ.

  15G ಹಿರಿಯ ನಾಗರೀಕರನ್ನು ಹೊರತುಪಡಿಸಿ ಇತರರು

  15H ಹಿರಿಯ ನಾಗರೀಕರು (65 ವರ್ಷಗಳಿಗೆ ಮೇಲ್ಪಟ್ಟವರು)

**ಪ್ರಕರಣ 194 ಸಿ : ಗುತ್ತಿಗೆ :**

- ಸಹಕಾರ ಸಂಸ್ಥೆಯು ಕಾರ್ಮಿಕ ಗುತ್ತಿಗೆ ಸಹಿತ ಯಾವುದೇ ಕಾಮಾಗಾರಿ ಒಪ್ಪಂದದನ್ವಯ ಗುತ್ತಿಗೆದಾರನಿಗೆ ಒಮ್ಮೆ 30,000 ರೂಗಳಿಗೆ ಯಾ ಒಂದು ವರ್ಷದಲ್ಲಿ 75,000 ರೂಗಳಿಗೆ ಮೀರಿ ಹಣ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**ಪ್ರಕರಣ 194 ಹೆಚ್ : ಕಮೀಷನ್ ಯಾ ದಲ್ಲಾಳಿ ಶುಲ್ಕ :**

- ಸಹಕಾರ ಸಂಸ್ಥೆಯು 5,000 ರೂಗಳಿಗೆ ಮೀರಿ ಕಮೀಷನ್ ಯಾ ದಲ್ಲಾಳಿ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ

ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

- ಸಹಕಾರಿಯಿಂದ ಪಡೆಯುವ ಕಮೀಷನ್ ವಾರ್ಷಿಕ 5,000 ರೂಗಳಿಗೆ ಮೀರಿದ್ದಲ್ಲಿ ಮತ್ತು ಅಂತಹವರ ವಾರ್ಷಿಕ ತೆರಿಗೆದಾಯಕ ಆದಾಯವು ತೆರಿಗೆಯ ಮಿತಿಗಿಂತ ಕಡಿಮೆ ಇದ್ದಲ್ಲಿ ಸಂಬಂಧಿಸಿದ ಆದಾಯ ತೆರಿಗೆ ಅಧಿಕಾರಿಗಳಿಗೆ ನಮೂನೆ 13ರಲ್ಲಿ ಅರ್ಜಿ ಸಲ್ಲಿಸಿ ವಿನಾಯಿತಿ ಪಡೆದಲ್ಲಿ ಅಂತಹವರಿಗೆ ಮೂಲದಲ್ಲಿ ತೆರಿಗೆ ಕಡಿತ ಮಾಡದೆ ಕಮೀಷನ್ ಪಾವತಿಸಬಹುದಾಗಿರುತ್ತದೆ.

**ಪ್ರಕರಣ 194 ಐ : ಬಾಡಿಗೆ :**

- ಸಹಕಾರ ಸಂಸ್ಥೆಯು ವಾರ್ಷಿಕ 1,80,000-00 ರೂಗಳಿಗೆ ಮೀರಿ ಬಾಡಿಗೆ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು. ಇಲ್ಲಿ ಬಾಡಿಗೆ ಎಂದರೆ ಲೀಸ್ ಯಾ ಯಾವುದೇ ಒಪ್ಪಂದದ ಮೇರೆಗೆ ಯಾವುದೇ ಭೂಮಿ ಯಾ ಕಟ್ಟಡ (ಪೀಠೋಪಕರಣ, ಜೋಡಣೆಗಳ ಸಹಿತ/ರಹಿತ)ಗಳ ಉಪಯೋಗಕ್ಕಾಗಿ ನೀಡುವ ಹಣ.

**ಪ್ರಕರಣ 194 ಜೆ : ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ :**

- ಸಹಕಾರ ಸಂಸ್ಥೆಯು ಯಾವುದೇ ವ್ಯಕ್ತಿಗೆ ವಾರ್ಷಿಕ 30,000 ರೂಗಳಿಗೆ ಮೀರಿ ವೃತ್ತಿಪರ ಅಥವಾ ತಾಂತ್ರಿಕ ಸೇವೆಗಳ ಶುಲ್ಕ ನೀಡುವಾಗ ಅಂತಹ ಮೊಬಲಗಿನ ಮೇಲೆ ನಿಗದಿತ ದರದಲ್ಲಿ ಆದಾಯ ತೆರಿಗೆಯನ್ನು ಮೂಲದಲ್ಲಿಯೇ ಕಡಿತಮಾಡಿ ನೀಡತಕ್ಕದ್ದು.

**18. ಪ್ರಕರಣ 203ಎ :**

- ಕಾಯ್ದೆಯ ಪ್ರಕಾರ ಮೂಲದಲ್ಲಿ ತೆರಿಗೆ ಕಡಿತ ಮಾಡುವ ಪ್ರತಿಯೊಂದು ಸಹಕಾರಿ ಸಂಸ್ಥೆಯು ಸೂಕ್ತ ಪ್ರಾಧಿಕಾರಕ್ಕೆ ನಮೂನೆ 49 ಬಿ ನಲ್ಲಿ ಅರ್ಜಿ ಸಲ್ಲಿಸುವುದರ ಮೂಲಕ ತೆರಿಗೆ ಖಾತೆ ಸಂಖ್ಯೆಯನ್ನು (TAN) ಪಡೆಯತಕ್ಕದ್ದು ಮತ್ತು ಮೂಲದಲ್ಲಿ ಕಡಿತ ಮಾಡಿದ ತೆರಿಗೆ ಪಾವತಿಸುವ ಎಲ್ಲ ಚಲನ್‌ಗಳಲ್ಲಿ ಮತ್ತು ಎಲ್ಲಾ ಮೂಲದಲ್ಲಿ ತೆರಿಗೆ ಕಡಿತ ಮಾಡಿದ ಪ್ರಮಾಣಪತ್ರಗಳಲ್ಲಿ ಈ ಖಾಯಂ ನೋಂದಣಿ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

**19. ಪ್ರಕರಣ 200 : ತೆರಿಗೆ ಕಡಿತಮಾಡಿದವರ ಬಾಧ್ಯತೆಗಳು :**

- ಮೇಲೆ ತಿಳಿಸಿದಂತೆ ಯಾವುದೇ ಬಾಬ್ತಿನಲ್ಲಿ ಮೂಲದಲ್ಲಿ ತೆರಿಗೆ ಕಡಿತಮಾಡಿದ ಸಹಕಾರಿ ಸಂಸ್ಥೆಯು ತೆರಿಗೆಯನ್ನು ಕಡಿತಮಾಡಿದ ತಿಂಗಳಿನ ಕೊನೆಯ ದಿನದಿಂದ ಏಳು ದಿನಗಳೊಳಗಾಗಿ ಕೇಂದ್ರ ಸರಕಾರಕ್ಕೆ ಜಮಾ ಮಾಡತಕ್ಕದ್ದು.
- ಕಡಿತಮಾಡಿ ಪಾವತಿಸಿದ ತೆರಿಗೆಯ ವಿವರಗಳನ್ನು ಮೂರು ತಿಂಗಳಿಗೊಮ್ಮೆಯಂತೆ ಸೂಕ್ತ ನಮೂನೆಯಲ್ಲಿ ದಾಖಲಿಸಿ ಸಂಬಂಧಿಸಿದ ಆದಾಯ ತೆರಿಗೆ ಇಲಾಖೆಗೆ ಸಲ್ಲಿಸತಕ್ಕದ್ದು.
- ಕಡಿತ ಮಾಡಿದ ತೆರಿಗೆ ಪ್ರಮಾಣಪತ್ರವನ್ನು ನಮೂನೆ 16ಎ ನಲ್ಲಿ ಸಂಬಂಧಿಸಿದ ವ್ಯಕ್ತಿಗೆ ನೀಡತಕ್ಕದ್ದು.

## CHART FOR DEDUCTION OF TAX AT SOURCE

| Section | Nature of payment | (from 01-04-2012) | Rate |
|---|---|---|---|
| 192 | Salary, wages, pension | 2,00,000-00 | - |
| 194 A | Interest on Deposits (Paid by Banks) | 10,000-00 | 10 % |
| 194 A | Interest on Deposits (Paid by Others) | 5,000-00 | 10 % |
| 194 C | Payment to contractors (Paid to Indl/HUF) | 30,000-00 | 1 % |
| 194 C | Payment to contractors (Paid to others) | 30,000-00 | 2 % |
| 194 H | Commission | 5,000-00 | 10 % |
| 194 I | Rent/Hire for land and building | 1,80,000-00 | 10 % |
| 194 I | Rent/Hire for Machinery, Plant & Equipment,Furniture | 1,80,000-00 | 2 % |
| 194 J | Professional/technical services | 30,000-00 | 10 % |

**Notes :**

1. To be paid to the Central Govt. within one week from the last day of the month in which the deduction is made.
2. The rate of TDS will be 20 per cent in all cases, if PAN is not quoted by the deductee w.e.f. 1.04.2012.

**20. ನೆನಪಿಡಬೇಕಾದ ಪ್ರಮುಖ ಅಂಶಗಳು :**

- ಶಾಶ್ವತ ನೋಂದಣಿ ಸಂಖ್ಯೆಯನ್ನು (PAN) ಪಡೆಯುವುದು.
- ಅಗತ್ಯವಿದ್ದಲ್ಲಿ ತೆರಿಗೆ ಖಾತೆ ಸಂಖ್ಯೆಯನ್ನು (TAN) ಪಡೆಯುವುದು.
- ಪ್ರತಿವರ್ಷ ವಾರ್ಷಿಕ ತೆರಿಗೆ ವರದಿಯನ್ನು ತಪ್ಪದೇ ಸಲ್ಲಿಸುವುದು.
- ಅನ್ವಯಿಸುವಲ್ಲಿ ಮೂಲದಲ್ಲಿ ತೆರಿಗೆ ಕಡಿತ ಮಾಡುವುದು.
- 40(A), 269(SS), 269(T) ಇವುಗಳನ್ನು ಗಮನದಲ್ಲಿರಿಸಿಕೊಂಡು ವ್ಯವಹರಿಸುವುದು.

**21. ಮಾಡು"ಗಳು :**

- ಪ್ರತಿ ವರ್ಷವೂ ನಿಗದಿತ ಸಮಯದೊಳಗೆ ವರದಿ ಸಲ್ಲಿಸಿ.
- ವೆಚ್ಚಮಾಡುವಾಗ ತೆರಿಗೆ ಕಾನೂನನ್ನು ಗಮನದಲ್ಲಿಟ್ಟುಕೊಳ್ಳಿ.
- ಅನ್ವಯಿಸುವಲ್ಲಿ ಟಿಡಿಎಸ್ ಖಂಡಿತಾ ಮಾಡಿ.
- ಟಿಡಿಎಸ್ ಮಾಡಿದಲ್ಲಿ ಸೂಕ್ತ ವರದಿ ಸಲ್ಲಿಸಿ.
- ಠೇವಣಿ ಸ್ವೀಕರಿಸುವಾಗ ಎಚ್ಚರದಿಂದಿರಿ.
- ಸಾಲ ನೀಡಿಕೆ/ಮರುಪಾವತಿಗಳ ಬಗ್ಗೆ ಗಮನವಿರಲಿ.
- ತೆರಿಗೆದಾಯಕ ವಹಿವಾಟುಗಳಿಗೆ ಪ್ರತ್ಯೇಕ ಲೆಕ್ಕಪತ್ರಗಳನ್ನಿಡಿ.
- ತೆರಿಗೆ ಕಾನೂನುಗಳ ಬಗ್ಗೆ ತಜ್ಞರ ಸಲಹೆ ತೆಗೆದುಕೊಳ್ಳಿ.

**22. ಮಾಡದಿರು"ಗಳು :**

- ತೆರಿಗೆ ಕಾನೂನುಗಳನ್ನು ಗೌಣವಾಗಿ ಕಾಣದಿರಿ, ಉಲ್ಲಂಘಿಸದಿರಿ, ಉಲ್ಲಂಘಿಸಲು ಸಲಹೆ ನೀಡದಿರಿ, ಪ್ರೇರೇಪಿಸದಿರಿ.
- ಸದಸ್ಯರಿಗೆ, ಗ್ರಾಹಕರಿಗೆ ತಪ್ಪು ಮಾಹಿತಿ ನೀಡಬೇಡಿ.

**23. ಆದಾಯ ತೆರಿಗೆ ಕಾಯ್ದೆಯಲ್ಲಿ ಗಮನಿಸಬೇಕಾದ ಅಂಶಗಳು :**

- ಪಾನ್/ ಟ್ಯಾನ್ ನಂಬರ್ ಹೊಂದುವುದು, ಜವಾಬ್ದಾರಿಗಳು.
- ವಾರ್ಷಿಕ ವರದಿಯನ್ನು ಕ್ಲಪ್ತಕಾಲದಲ್ಲಿ ಸಲ್ಲಿಸುವುದು.
- ಸದರಿ ಸಾಲಿನ ಮಿತಿ/ಪರಿಮಿತಿಗಳ ತಿಳುವಳಿಕೆ ಹೊಂದುವುದು.
- ತೆರಿಗೆ ತಪ್ಪಿಸುವ ಬದಲು ತೆರಿಗೆ ಉಳಿಸಲು ಯೋಚಿಸುವುದು.
- ತೆರಿಗೆ ಪ್ರಾವಧಾನಗಳ ಗಂಭೀರ ಪರಿಣಾಮಗಳನ್ನು ಯೋಚಿಸುವುದು.
- ದಂಡ, ಬಡ್ಡಿ ತಪ್ಪಿಸಲು ದಾಖಲೆಗಳನ್ನು ಸಕ್ರಮವಾಗಿಡುವುದು.
- ಪೂರ್ವಭಾವಿಯಾಗಿ ಸಾಕಷ್ಟು ತಯಾರಿ ನಡೆಸಿಕೊಳ್ಳುವುದು.

**ವೃತ್ತಿ ತೆರಿಗೆ ಕಾಯ್ದೆ :**

- ಪ್ರಸಕ್ತ ಜಾರಿಯಲ್ಲಿರುವ ವೃತ್ತಿ ತೆರಿಗೆ ಕಾಯ್ದೆಯಂತೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಣಿಗೊಂಡ ಸಹಕಾರಿ ಸಂಸ್ಥೆಯು ಯಾವುದೇ ವೃತ್ತಿ, ವ್ಯಾಪಾರ ಯಾ ಕಸುಬುಗಳನ್ನು ನಡೆಸುತ್ತಿದ್ದರೆ ವೃತ್ತಿ ತೆರಿಗೆ ಪಾವತಿಸ ಬೇಕಾಗುತ್ತದೆ.
- ಸಹಕಾರ ಸಂಸ್ಥೆಯು ಕೇವಲ ಪತ್ತಿನ ಚಟುವಟಿಕೆಗಳನ್ನು ನಡೆಸುತ್ತಿದ್ದು ತಾಲ್ಲೂಕಿಂತ ಕಡಿಮೆ ವ್ಯಾಪ್ತಿಯದ್ದಾಗಿದ್ದರೆ ಪ್ರಸಕ್ತ ಜಾರಿಯಲ್ಲಿರುವ ವೃತ್ತಿತೆರಿಗೆ ಕಾಯ್ದೆಯಡಿಯಲ್ಲಿ ವೃತ್ತಿ ತೆರಿಗೆ ಪಾವತಿಸಬೇಕಿರುವುದಿಲ್ಲ. ಬೇರೆ ಯಾವುದೇ ಚಟುವಟಿಕೆಗಳನ್ನು ನಡೆಸುತ್ತಿದ್ದರೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ. ಹಾಗೂ ಶಾಖೆಗಳನ್ನು ಹೊಂದಿದ್ದರೆ ಪ್ರತಿ ಶಾಖೆಗೂ ವೃತ್ತಿ ತೆರಿಗೆ ಪಾವತಿಸಬೇಕಿರುತ್ತದೆ.
- ಹಾಲಿ ಇರುವ ಕಾಯ್ದೆಯಂತೆ ಸಹಕಾರ ಸಂಸ್ಥೆಯು ವ್ಯಾಪ್ತಿಯ ಆಧಾರದಲ್ಲಿ ಈ ಕೆಳಕಂಡಂತೆ ವೃತ್ತಿ ತೆರಿಗೆ ಪಾವತಿಸ ಬೇಕಾಗಿರುತ್ತದೆ.

  ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ ಇಲ್ಲ

  ತಾಲ್ಲೂಕು ವ್ಯಾಪ್ತಿ ರೂ 1000–00

  ಜಿಲ್ಲಾ ವ್ಯಾಪ್ತಿ ರೂ 1500–00

  ಜಿಲ್ಲಾವ್ಯಾಪ್ತಿ ಮೀರಿ (ರಾಜ್ಯವ್ಯಾಪ್ತಿ) ರೂ 2500–00

- ಸಹಕಾರ ಸಂಸ್ಥೆಯು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (VAT) ಕಾಯ್ದೆ ಅಡಿಯಲ್ಲಿ ನೋಂದಣಿಯನ್ನು ಹೊಂದಿದ್ದಲ್ಲಿ ತನ್ನ ವಾರ್ಷಿಕ ವ್ಯಾಪಾರ ವಹಿವಾಟಿಗನುಗುಣವಾಗಿ ಈ ಕೆಳಕಂಡಂತೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ.

  ಎರಡು (ಐದು) ಲಕ್ಷರೂವರೆಗೆ ಇಲ್ಲ

  ಹತ್ತು ಲಕ್ಷರೂವರೆಗೆ ರೂ 1000–00

  ಇಪ್ಪತ್ತೈದು ಲಕ್ಷದವರೆಗೆ ರೂ 1500–00

  ಇಪ್ಪತ್ತೈದು ಲಕ್ಷದ ಮೇಲ್ಪಟ್ಟು ರೂ 2500–00

- ಸಹಕಾರ ಸಂಸ್ಥೆಯು ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮದಡಿಯಲ್ಲಿ ನೋಂದಣಿಯನ್ನು ಹೊಂದಿದ್ದಲ್ಲಿ ತನ್ನ ಸಿಬ್ಬಂದಿಗಳ ಸಂಖ್ಯೆಗನುಗುಣವಾಗಿ ಕೆಳಕಂಡಂತೆ ವೃತ್ತಿತೆರಿಗೆ ಪಾವತಿಸಬೇಕಾಗಿರುತ್ತದೆ.

  ಸಿಬ್ಬಂದಿಗಳಿಲ್ಲದಿದ್ದರೆ ಇಲ್ಲ

  ಐದು ಮಂದಿ ಸಿಬ್ಬಂದಿಗಳವರೆಗೆ ರೂ. 1000–00

  ಹತ್ತು ಮಂದಿ ಸಿಬ್ಬಂದಿಗಳವರೆಗೆ ರೂ. 1500–00

ಹತ್ತು ಮಂದಿ ಸಿಬ್ಬಂದಿಗಳಿಗೆ ಮೇಲ್ಪಟ್ಟು ರೂ. 2500–00

- ಅಂತಹ ಸಹಕಾರ ಸಂಸ್ಥೆಗಳು ನಮೂನೆ 1ರಲ್ಲಿ ಅರ್ಜಿಸಲ್ಲಿಸಿ ನೋಂದಣಿಯನ್ನು ಪಡೆಯತಕ್ಕದ್ದು ಮತ್ತು ವಾರ್ಷಿಕವಾಗಿ ನಿಯಮಿತವಾಗಿ ವೃತ್ತಿತೆರಿಗೆಯನ್ನು ಪಾವತಿಸತಕ್ಕದ್ದು.
- ಶಾಖೆಗಳನ್ನು ಹೊಂದಿದ್ದರೆ ಪ್ರತಿ ಶಾಖೆಗೂ ಪ್ರತ್ಯೇಕವಾಗಿ ವೃತ್ತಿತೆರಿಗೆಯನ್ನು ಪಾವತಿಸ ಬೇಕಿರುತ್ತದೆ.
- ಇದಲ್ಲದೆ ಸಹಕಾರ ಸಂಸ್ಥೆಯ ಯಾವುದೇ ನೌಕರನ ಮಾಸಿಕ ಒಟ್ಟು ಸಂಬಳವು ಕೆಳಕಂಡ ಮಿತಿಗಳಿಗೆ ಮೀರಿದಲ್ಲಿ ಅಂತಹವರಿಗೆ ವೃತ್ತಿ ತೆರಿಗೆ ಬಾಧ್ಯತೆ ಇರುತ್ತದೆ. ತೆರಿಗೆಯನ್ನು ವೇತನದಾತರು ವೇತನದಾರರ ಸಂಬಳದಿಂದ ಕಡಿತಮಾಡಿ ಸರಕಾರಕ್ಕೆ ಪಾವತಿಸಬೇಕಾಗಿರುತ್ತದೆ.

  > 10,000 < 15,000 ರೂ 150–00 ಪ್ರತಿ ಮಾಸಿಕ

  > 15,000 ರೂ 200–00 ಪ್ರತಿ ಮಾಸಿಕ

- ಅಂತಹ ಸಹಕಾರ ಸಂಸ್ಥೆಗಳು ನಮೂನೆ 2ರಲ್ಲಿ ಅರ್ಜಿ ಸಲ್ಲಿಸಿ ದಾಖಲಾತಿ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.
- ನಿಯಮಿತವಾಗಿ ವೃತ್ತಿತೆರಿಗೆಯನ್ನು ಆಯಾ ನೌಕರರ ವೇತನದಲ್ಲಿ ಕಡಿತಗೊಳಿಸಿ ಸರ್ಕಾರಕ್ಕೆ ಪಾವತಿಸತಕ್ಕದ್ದು.
- ನಿಯಮಿತವಾಗಿ ವೃತ್ತಿತೆರಿಗೆ ಇಲಾಖೆಗೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.
- ವರ್ಷಕ್ಕೊಮ್ಮೆ ಇಲಾಖೆಯ ಅಧಿಕಾರಿಗಳಿಂದ ಕರ ನಿರ್ಧರಣೆಯನ್ನು ಮಾಡಿಸಬೇಕಾಗಿರುತ್ತದೆ.

**ಸೇವಾ ತೆರಿಗೆ ಕಾಯ್ದೆ**

1. **ಸೇವಾ ತೆರಿಗೆ ಎಂದರೇನು?**

   ಸೇವಾ ತೆರಿಗೆಯು ಕೆಲವು ನಿರ್ದಿಷ್ಟ ಸೇವೆಯನ್ನು ಒದಗಿಸುವ ನಿರ್ದಿಷ್ಟ ವ್ಯಕ್ತಿಗಳು ತಾವು ಒದಗಿಸುವ ಸೇವೆಯ ಮೇಲೆ ಪಾವತಿಸಬೇಕಾಗಿರುವ ಪರೋಕ್ಷ ತೆರಿಗೆಯಾಗಿರುತ್ತದೆ.

2. **ಎಂದಿನಿಂದ ಜಾರಿಗೆ ಬಂದಿತು?**

   ಕೇಂದ್ರ ಸರಕಾರವು ವಿಧಿಸಿರುವ ಈ ತೆರಿಗೆಯ ಕಾಯ್ದೆಯು 1994ರ ಹಣಕಾಸು ವಿಧೇಯಕದ ಮೂಲಕ ದಿನಾಂಕ 01–07–1994ರಿಂದ ಜಾರಿಗೆ ಬಂದಿರುತ್ತದೆ.

3. **ಬಾಧ್ಯತೆ ಯಾರಿಗೆ?**

   ನಿರ್ದಿಷ್ಟಪಡಿಸಿದ ತೆರಿಗೆದಾಯಕ ಸೇವೆಗಳನ್ನು ಒದಗಿಸುವ ನಿರ್ದಿಷ್ಟಪಡಿಸಿದ ವ್ಯಕ್ತಿಗಳು ತಾವು ನೀಡುವ ಸೇವೆಯು ತೆರಿಗೆದಾಯಕ ಮಿತಿಯನ್ನು ಮೀರಿದಲ್ಲಿ ತೆರಿಗೆ ಬಾಧ್ಯತೆಗೊಳಪಡುತ್ತಾರೆ.

4. **ತೆರಿಗೆದಾಯಕ ಸೇವೆಗಳು ಯಾವುವು?**

   ಕೆಲವು ನಿರ್ದಿಷ್ಟಪಡಿಸಿದ ಸೇವೆಯನ್ನು ಹೊರತುಪಡಿಸಿದಂತೆ ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಯೂ ಸೇರಿದಂತೆ ಎಲ್ಲ ರೀತಿಯ ವಾಣಿಜ್ಯ ಸೇವೆಗಳನ್ನೂ ಸೇವಾತೆರಿಗೆಯ ವ್ಯಾಪ್ತಿಯಲ್ಲಿ ತರಲಾಗಿದೆ.

5. **ಯಾರು ನೋಂದಣಿ ಪಡೆಯಬೇಕು?**

   ಯಾವುದೇ ವ್ಯಕ್ತಿಯು ಹಿಂದಿನ ಸಾಲಿನಲ್ಲಿ ತನ್ನ ವಾರ್ಷಿಕ ತೆರಿಗೆದಾಯಕ ಸೇವಾ ಮೌಲ್ಯ ಒಂಭತ್ತು ಲಕ್ಷಕ್ಕಿಂತ ಹೆಚ್ಚಾಗಿದ್ದಲ್ಲಿ ಸೇವಾತೆರಿಗೆ ಇಲಾಖೆಯಲ್ಲಿ ನೋಂದಣಿ ಪಡೆಯಬೇಕಾಗಿರುತ್ತದೆ.

6. **ವಿನಾಯಿತಿಯ ಮಿತಿಗಳು :**

   ಸೇವಾದಾತರ ತೆರಿಗೆದಾಯಕ ಸೇವೆಗಳ ವಾರ್ಷಿಕ ಮೌಲ್ಯ ಹತ್ತು ಲಕ್ಷಕ್ಕೆ ಮೀರದಿದ್ದಲ್ಲಿ ತೆರಿಗೆ ಬಾಧ್ಯತೆ ಇರುವುದಿಲ್ಲ.

7. **ನೋಂದಣಿ ಹೇಗೆ?**

   ನೋಂದಣಿ ಅರ್ಜಿಯನ್ನು ಕೆಲವು ನಿರ್ದಿಷ್ಟಪಡಿಸಿದ ದಾಖಲೆಗಳೊಂದಿಗೆ ಸೂಕ್ತ ಕಛೇರಿಗೆ ಸಲ್ಲಿಸಿ ನೋಂದಣಿ ಪಡೆಯಬಹುದು.

8. **ತೆರಿಗೆ ದರಗಳೇನು ?**

   ಸೇವಾ ತೆರಿಗೆ 12% ಶಿಕ್ಷಣ ಸೆಸ್ 2% (ಸೇವಾ ತೆರಿಗೆಯ ಮೇಲೆ) ಉನ್ನತ ಶಿಕ್ಷಣ ಸೆಸ್ 1% (ಸೇವಾ ತೆರಿಗೆಯ ಮೇಲೆ) ಒಟ್ಟು 12.36%.

9. **ನೋಂದಾಯಿತರ ಕರ್ತವ್ಯಗಳೇನು :**

- ಪ್ರತಿ ತಿಂಗಳು ಜಮಾ ಬಂದಿರುವ ತೆರಿಗೆದಾಯಕ ಸೇವೆಗಳ ಮೇಲಿನ ತೆರಿಗೆಯನ್ನು ಮುಂದಿನ ತಿಂಗಳ ಐದನೇ ತಾರೀಖಿನೊಳಗಾಗಿ ಸರ್ಕಾರಕ್ಕೆ ಪಾವತಿಸಬೇಕು.
- ಆರು ತಿಂಗಳಿಗೊಮ್ಮೆ ಅರ್ಧವಾರ್ಷಿಕ ವರದಿಯನ್ನು ಅಕ್ಟೋಬರ್ 25 ಹಾಗೂ ಏಪ್ರಿಲ್ 25ರೊಳಗಾಗಿ ಸೂಕ್ತ ನಮೂನೆಯಲ್ಲಿ ಇಲಾಖೆಗೆ ಸಲ್ಲಿಸುವುದು.
- ಇಲಾಖೆಯವರು ಲೆಕ್ಕ ಪರಿಶೋಧನೆಗೆ ವಿವರಗಳನ್ನು ಕೇಳಿದಾಗ ಸಲ್ಲಿಸುವುದು.

**10. ದಂಡ ಮತ್ತು ಬಡ್ಡಿಗಳು :**

| | ವಿವರಗಳು | ದಂಡ | | ವಾರ್ಷಿಕ ಬಡ್ಡಿ |
|---|---|---|---|---|
| | | ಕನಿಷ್ಟ | ಗರಿಷ್ಠ | |
| 1 | ನೋಂದಾಯಿಸಲು ವಿಫಲನಾದಲ್ಲಿ ಅಥವಾ ವಿಳಂಬ ಮಾಡಿದಲ್ಲಿ | ಪ್ರತಿ ದಿನಕ್ಕೆ 200 ರೂಗಳು | 5000 ರೂಗಳು | ಶೇ 13 |
| 2 | ತೆರಿಗೆಯನ್ನು ಪಾವತಿಸದಿದ್ದಲ್ಲಿ ಅಥವಾ ವಿಳಂಬ ಮಾಡಿದಲ್ಲಿ | ತೆರಿಗೆ ಬಾಕಿ ಮೇಲೆ 2% ಯಾ ಪ್ರತಿದಿನಕ್ಕೆ 200 ರೂಗಳು | ಪಾವತಿಸಬೇಕಾದ ತೆರಿಗೆಯ ಮೊತ್ತ | ಶೇ 13 |
| 3 | ವರದಿಯನ್ನು ಸಲ್ಲಿಸದಿದ್ದಲ್ಲಿ ಅಥವಾ ವಿಳಂಬ ಮಾಡಿದಲ್ಲಿ | ಪ್ರತಿ ದಿನಕ್ಕೆ 100 ರೂಗಳು | 2000 ರೂಗಳು | ಶೇ 13 |
| 4 | ತೆರಿಗೆದಾಯಕ ಸೇವೆಯ ಬಗ್ಗೆ ಸುಳ್ಳು ಅಥವಾ ತಪ್ಪು ಮಾಹಿತಿ ಒದಗಿಸಿದಲ್ಲಿ | ತಪ್ಪಿಸಿದ ತೆರಿಗೆಯ ಒಂದು ಪಟ್ಟು | ತಪ್ಪಿಸಿದ ತೆರಿಗೆಯ ಎರಡು ಪಟ್ಟು | ಶೇ 13 |
| 5 | ಕರ ನಿರ್ಧರಣೆಗೆ ಸಂಬಂಧಿಸಿದಂತೆ ಇಲಾಖೆಯವರು ನೀಡಿದ ತಿಳುವಳಿಕೆಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸದಿದ್ದಲ್ಲಿ | ಅಧಿಕಾರಿಗಳು ನಿರ್ಧರಿಸಿದಂತೆ | 1,000 ರೂ.ಗಳು | ಶೇ 13 |

**1. ನೋಂದಣಿ :**

ಕ.ಮೌ.ತೆ. ಕಾಯ್ದೆಯ ಪ್ರಕರಣ 22ರ ಪ್ರಕಾರ ಕೆಳಗೆ ಕಾಣಿಸಿದ ವ್ಯಾಪಾರಿಗಳು ನೋಂದಾವಣಿ ಮಾಡಿಸುವುದು ಅವಶ್ಯಕವಾಗಿದೆ.

1. ವಾರ್ಷಿಕ ತೆರಿಗೆದಾಯಕ ಮಾರಾಟವು (Taxable turnover) ಐದು ಲಕ್ಷ ರೂ. ಮೀರಿದಲ್ಲಿ
2. ವರ್ಷದ ಯಾವುದೇ ಒಂದು ತಿಂಗಳಲ್ಲಿ ತೆರಿಗೆದಾಯಕ ಮಾರಾಟವು ರೂ. 40000 ರೂ ಮೀರಿದಲ್ಲಿ
3. ರಾಜ್ಯದ ಹೊರಭಾಗದಿಂದ ತೆರಿಗೆ ಭಾದ್ಯತೆಯುಳ್ಳ ಸರಕನ್ನು ಕ್ರಯ ಅಥವಾ ವಿಕ್ರಯ ಮಾಡಿದಲ್ಲಿ
4. ಯಾವುದೇ ಗುತ್ತಿಗೆ ಕೆಲಸದಲ್ಲಿ ತೊಡಗಿಸಿಕೊಂಡಲ್ಲಿ (Engaged in works contract)
5. ಇನ್ನಿತರ ವ್ಯಾಪಾರಿಗಳೂ ಸಹ ಸ್ವ ಇಚ್ಛೆಯಿಂದ ನೊಂದಾವಣಿ ಮಾಡಿಸಬಹುದು.

ನೋಂದಣಿಗೆ ಸಂಬಂಧಿಸಿದಂತೆ ವ್ಯಾಪಾರಿಯು ವ್ಯಾಟ್ ನಮೂನೆ 1 ನ್ನು ಸಂಬಂಧಪಟ್ಟ ಅಧಿಕಾರಿಗೆ ರೂ. 500 ನೋಂದಣಿ ಶುಲ್ಕ ಹಾಗೂ ಇತರ ಅವಶ್ಯಕ ದಸ್ತಾವೇಜುಗಳೊಂದಿಗೆ ಸಲ್ಲಿಸುವುದು.

**2. ಹೂಡುವಳಿ ಮತ್ತು ಹುಟ್ಟುವಳಿ ತೆರಿಗೆ :**

ಮೌಲ್ಯವರ್ಧಿತ ತೆರಿಗೆಯ ಪ್ರಕಾರ ವ್ಯಾಪಾರಿಯು ತಾನು ಖರೀದಿಸಿದ ಸರಕುಗಳ ಮೇಲೆ ಪಾವತಿಸಿದ ತೆರಿಗೆಯನ್ನು "ಹೂಡುವಳಿ ತೆರಿಗೆ" ಯೆಂದು ಹಾಗೂ ತಾನು ಮಾರಾಟಮಾಡಿದ ಸರಕಿನ ಮೇಲೆ ಪಾವತಿಸಬೇಕಾದ ತೆರಿಗೆಯನ್ನು "ಹುಟ್ಟುವಳಿ ತೆರಿಗೆ" ಯೆಂದು ಕರೆಯುತ್ತಾರೆ. ವ್ಯಾಪಾರಿಯು ಹುಟ್ಟುವಳಿ ತೆರಿಗೆಯನ್ನು ಪಾವತಿಸುವ ಸಂದರ್ಭದಲ್ಲಿ, ಜಮಾ ಇರುವ ಹೂಡುವಳಿ ತೆರಿಗೆಯನ್ನು ವಜಾ ಮಾಡಿಕೊಂಡು ನಿವ್ವಳ ತೆರಿಗೆಯನ್ನು ಪಾವತಿಸುವುದು. ವ್ಯಾಪಾರಿಯ ಜಮಾದಲ್ಲಿರುವ ಹೂಡುವಳಿ ತೆರಿಗೆಯು ವ್ಯಾಪಾರಿಯು ಪಾವತಿಸಬೇಕಾದ ಹುಟ್ಟುವಳಿ ತೆರಿಗೆಗಿಂತ ಅಧಿಕವಾಗಿದ್ದಲ್ಲಿ ಹೆಚ್ಚುವರಿ ತೆರಿಗೆಯನ್ನು ಮುಂದಿನ ತೆರಿಗೆ ಅವಧಿಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದು.

**3. ತೆರಿಗೆ ಪಾವತಿಸುವ ಪದ್ಧತಿಗಳು :**

**1. ಸಾಮಾನ್ಯ ಪದ್ಧತಿ (Regular System) :**

ಈ ಪದ್ಧತಿಯ ಪ್ರಕಾರ ವ್ಯಾಪಾರಿಯು ಹುಟ್ಟುವಳಿ ತೆರಿಗೆಯನ್ನು ಪಾವತಿಸುವ ಸಂದರ್ಭದಲ್ಲಿ, ಜಮಾ ಇರುವ ಹೂಡುವಳಿ ತೆರಿಗೆಯನ್ನು ವಜಾ ಮಾಡಿಕೊಂಡು ನಿವ್ವಳ ತೆರಿಗೆಯನ್ನು ಪಾವತಿಸಬೇಕಾಗುವುದು. ವ್ಯಾಪಾರಿಯ ಜಮಾದಲ್ಲಿರುವ ಹೂಡುವಳಿ ತೆರಿಗೆಯು ವ್ಯಾಪಾರಿಯು ಪಾವತಿಸಬೇಕಾದ ಹುಟ್ಟುವಳಿ ತೆರಿಗೆಗಿಂತ ಅಧಿಕವಾಗಿದ್ದಲ್ಲಿ ಹೆಚ್ಚುವರಿ ತೆರಿಗೆಯನ್ನು ಮುಂದಿನ ತೆರಿಗೆ ಅವಧಿಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದು.

2. ಸಂಯೋಜನೆ ಪದ್ಧತಿ(ಅಂಟಂಂಖಿಥುಣುಂಟ ಖಧಿಣಜಟ):

ಈ ಪದ್ಧತಿ ಪ್ರಕಾರ ವ್ಯಾಪಾರಿಯು ತನ್ನ ವಹಿವಾಟಿನ ಮೇಲೆ ಶೇಕಡಾ 1 ದರದಲ್ಲಿ ತೆರಿಗೆಯನ್ನು ಪಾವತಿಸಬೇಕು. ಈ ಪದ್ಧತಿಯನ್ನು ಆಯ್ಕೆ ಮಾಡಿರುವ ವ್ಯಾಪಾರಿಗಳಿಗೆ ತಾವು ಖರೀದಿ ಮಾಡಿರುವ

ಸರಕುಗಳ ಮೇಲೆ ಪಾವತಿಸಿರುವ ಹೂಡುವಳಿ ತೆರಿಗೆಯನ್ನು ತಾನು ಪಾವತಿಸಬೇಕಾದ ಹುಟ್ಟುವಳಿ ತೆರಿಗೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಆದರೆ ವ್ಯಾಪಾರಿಯ ವಾರ್ಷಿಕ ವ್ಯಾಪಾರ 25 ಲಕ್ಷಕ್ಕೂ ಮೀರಿದಲ್ಲಿ ಅಥವಾ ವ್ಯಾಪಾರಿಯು ಹೊರರಾಜ್ಯಗಳೊಂದಿಗೆ ವ್ಯಾಪಾರ ಮಾಡುತ್ತಿದ್ದಲ್ಲಿ ಸಂಯೋಜನೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

**4. ಲೆಕ್ಕ ಪುಸ್ತಕಗಳ ನಿರ್ವಹಣೆ ಮತ್ತು ಪರಿಶೋಧನೆ (ಪ್ರಕರಣ 31) :**

ಈ ಕಾಯ್ದೆಯಡಿಯಲ್ಲಿ ನೋಂದಾವಣಿಯಾಗಿರುವ ವ್ಯಾಪಾರಿಗಳು, ಖರೀದಿ, ಮಾರಾಟ, ಉತ್ಪಾದನೆ, ಸರಕು, ಹೂಡುವಳಿ ಮತ್ತು ಹುಟ್ಟುವಳಿ ತೆರಿಗೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಅಥವಾ ಹಿಂದಿ ಭಾಷೆಯಲ್ಲಿ ಲೆಕ್ಕಪುಸ್ತಕಗಳನ್ನು ಇಡಬೇಕಾಗುವುದು. ಈ ಲೆಕ್ಕಪುಸ್ತಕಗಳನ್ನು ಸಂಬಂಧಿಸಿದ ವರ್ಷಾಂತ್ಯದಿಂದ ಐದು ವರ್ಷಗಳ ಅವಧಿಯವರೆಗೆ ಕಾಯ್ದಿರಿಸಬೇಕಾಗುವುದು. ತೆರಿಗೆ ನಿರ್ಧರಣೆ ಅಥವಾ ಯಾವುದಾದರು ವಿಷಯದಲ್ಲಿ ವ್ಯಾಜ್ಯವಿದ್ದಲ್ಲಿ ವ್ಯಾಜ್ಯ ಮುಗಿಯುವವರೆಗೂ ಸಂಬಂಧಿಸಿದ ಲೆಕ್ಕಪತ್ರಗಳನ್ನು ಇಡಬೇಕಾಗುತ್ತದೆ. ವಾರ್ಷಿಕ ವಹಿವಾಟು ನಲವತ್ತು ಲಕ್ಷಗಳಿಗೆ ಮೀರಿದ್ದಲ್ಲಿ ಲೆಕ್ಕಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್/ ಕಾಸ್ಟ್ ಅಕೌಂಟೆಂಟ್/ ತೆರಿಗೆ ಸಲಹೆಗಾರರಿಂದ ಲೆಕ್ಕ ಪರಿಶೋಧನೆ ಮಾಡಿ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಬೇಕು.

**5. ರಿಟರ್ನ್ ಸಲ್ಲಿಸುವ ವಿಧಾನ :**

ಸಂಯೋಜನೆ ಪದ್ಧತಿ (composition system) ಆಯ್ಕೆ ಮಾಡಿರುವ ವ್ಯಾಪಾರಿಗಳು 3 ತಿಂಗಳ ಅವಧಿಯ ಮತ್ತು ಇತರೆ ವ್ಯಾಪಾರಿಗಳು 1 ತಿಂಗಳ ಅವಧಿಯ ಖರೀದಿ, ಮಾರಾಟ, ಹೂಡುವಳಿ ಮತ್ತು ಹುಟ್ಟುವಳಿ ತೆರಿಗೆಗಳ ವಿವರಗಳನ್ನು ನಮೂನೆ ವ್ಯಾಟ್ 100ಅನ್ನು ತೆರಿಗೆ ಪಾವತಿಮಾಡಿದ ದಾಖಲೆಗಳೊಂದಿಗೆ ಸ್ಥಳೀಯ ಮೌಲ್ಯ ವರ್ಧಿತ ತೆರಿಗೆ ಅಧಿಕಾರಿಗಳಿಗೆ ತೆರಿಗೆ ಅವಧಿ ಮುಗಿದ ಇಪ್ಪತ್ತು ದಿನದೊಳಗೆ ಸಲ್ಲಿಸುವುದು. ಈಗಾಗಲೆ ಸಲ್ಲಿಸಿರುವ ತೆರಿಗೆ ವಿವರಗಳಲ್ಲಿ ಯಾವುದಾದರೂ ಲೋಪ–ದೋಷಗಳು ಕಂಡುಬಂದಲ್ಲಿ ಸಂಬಧಿಸಿದ ತೆರಿಗೆಯ ಅವಧಿಯ ಆರು ತಿಂಗಳೊಳಗೆ, ಪರಿಷ್ಕೃತ ರಿರ್ಟನ್ ಸಲ್ಲಿಸಲು ಅವಕಾಶವಿರುತ್ತದೆ.

**ಸಹಕಾರಿ ಸಂಸ್ಥೆಗಳಿಗೆ ಅನ್ವಯಿಸುವ ಇತರೆ ಕಾಯ್ದೆಗಳು :**

ಮೇಲೆ ಸವಿವರವಾಗಿ ವಿವರಿಸಿದ ಕಾಯ್ದೆಗಳಲ್ಲದೆ ಈ ಕೆಳಕಂಡವುಗಳ ಬಗ್ಗೆಯೂ ಪ್ರಾಥಮಿಕ ಮಾಹಿತಿ ಇರಬೇಕಾದ್ದು ಅತ್ಯವಶ್ಯಕ.

1. Bye laws of the Society
2. The Karnataka Co-op. Societies Act, 1959 (KCS Act)
3. The Multi-State Co-op. Societies Act, 2002 and Rules
4. The Karnataka Souhardha Sahakari Act and Rules
5. The Banking Regulation Act, 1949
6. The Reserve Bank of India Act
7. The Income Tax Act, 1961 and Rules
8. The Service Tax Act and Rules
9. The Karnataka Stamp Act, 1957
10. Prevention of Money Laundering Act, 2002
11. Credit Information Companies Regulation Act, 2005
12. Securitisation and Reconstruction of Financial Assets and Enforcement of Security Interest Act, 2002
13. Banking Cash Transaction Tax
14. Securities Transaction tax
15. Information Technology Act, 2000
16. Transfer of Property Act 1882
17. Sale of Goods Act 1930
18. Laws of Limitation
19. Circulars issued by Reserve Bank of India
20. Accounting Standards - Policies & Guidelines
21. Ordinances issued by the Govts. - Central or State
22. Karnataka Shops & Commercial Establishments Act
23. Payment of Wages Act, 1936
24. Minimum Wages Act, 1948
25. Workmen's Compensation Act, 1923
26. Employees State Insurance Act (ESIC)
27. Payment of Gratuity Act, 1972
28. The Foreign Exchange Management Act, 1999
29. Consumer Protection Act, 1986

:: ಧನ್ಯವಾದಗಳು ::

# ಪತ್ತಿನ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ – ನಿರ್ಧರಿತ ಪ್ರಕರಣಗಳು ಮತ್ತು ಅವುಗಳ ವಿಶ್ಲೇಷಣೆ

▸▸ **ಶ್ರೀಕಾಂತ ಬರುವೆ,** ಸಹ ಪ್ರಧಾನ ವ್ಯವಸ್ಥಾಪಕರು.

ಇತ್ತೀಚಿನ ದಿನಗಳಲ್ಲಿ ಪತ್ತಿನ ಚಟುವಟಿಕೆ ನಡೆಸುತ್ತಿರುವ ಸೌಹಾರ್ದ ಸಹಕಾರಿಗಳ ಬಾಯಲ್ಲಿ ಕೇಳಿ ಬರುತ್ತಿರುವ ಮಾತು ಒಂದೆ ಸಹಕಾರಿಗೆ ಆದಾಯ ತೆರಿಗೆ ಇಲಾಖೆಯಿಂದ ತೆರಿಗೆ ಪಾವತಿಸುವಂತೆ ನೋಟೀಸ್ ಬಂದಿರುತ್ತದೆ ಏನು ಮಾಡಬೇಕು ದಯವಿಟ್ಟು ಸಲಹೆ ನೀಡಿ, ಮಾರ್ಗದರ್ಶನ ಮಾಡಿ ಎಂಬುದಾಗಿತ್ತು ಈ ಎಲ್ಲಾ ಪ್ರಶ್ನೆಗಳಿಗೆ ನಾವು ನೀಡುತ್ತಿದ್ದ ಉತ್ತರ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ಅಡಿಯಲ್ಲಿ ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗೆ ಆದಾಯ ತೆರಿಗೆ ಅನ್ವಯಿಸುವುದಿಲ್ಲ ಆದ್ದರಿಂದ ಆದಾಯ ತೆರಿಗೆ ಪಾವತಿಸಬೇಕಾದ ಅವಶ್ಯಕತೆಯಿರುವುದಿಲ್ಲ ಈ ವಿಷಯವನ್ನು ಅಸೆಸಿಂಗ್ ಅಧಿಕಾರಿಗೆ ಮನವರಿಕೆ ಮಾಡಿಕೊಡಿ ಎಂದು ತಿಳಿಸಲಾಗುತ್ತಿತ್ತು. ಹೀಗೆ ತಿಳಿಸಿ ಕೆಲವು ದಿನಗಳ ನಂತರ ಮತ್ತೆ ಅದೇ ಸಹಕಾರಿಯಿಂದ ದೂರವಾಣಿ ಕರೆ, ನೀವು ತಿಳಿಸಿರುವಂತೆ ಅಸೆಸಿಂಗ್ ಅಧಿಕಾರಿಗೆ ಮನವರಿಕೆ ಮಾಡಿಕೊಡಲು ಪ್ರಯ್ನಿಸಿದೆವು ಆದರೆ ಅಸೆಸಿಂಗ್ ಅಧಿಕಾರಿ ನಮ್ಮ ಸಹಕಾರಿಯನ್ನು 'ಬ್ಯಾಂಕ್' ಎಂದು ಪರಿಗಣಿಸಿ ನಿಮ್ಮ ಸಹಕಾರಿಗೆ ತೆರಿಗೆ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ವಿನಾಯಿತಿ ಅನ್ವಯಿಸುವುದಿಲ್ಲ ಆದ್ದರಿಂದ ಆದಾಯ ತೆರಿಗೆ ಪಾವತಿಸುವಂತೆ ತಿಳಿಸಿರುತ್ತಾರೆ ಎಂದು ತಿಳಿಸುತ್ತಾರೆ. ಇದು ಸಾಮಾನ್ಯವಾಗಿ ಸಂಭವಿಸುತ್ತಿರುವ ಘಟನಾವಳಿಗಳು. ಇಂತಹ ಅನುಭವ ನಿಮ್ಮ ಸಹಕಾರಿಗೂ ಸಹ ಆಗಿರಬಹುದು.

ಸಹೃದಯ ಸಹಕಾರಿಗಳೇ ಧೃತಿಗೆಡಬೇಕಿಲ್ಲ, ನಿರಾಶರಾಗಬೇಕಿಲ್ಲ, ಹೇದರಬೇಕಿಲ್ಲ ಕಾಯ್ದೆ, ಕಾನೂನುಗಳು ಇರುವುದು ತೊಂದರೆಯ ನಿವಾರಣೆಗೆ ಹೊರತು ತೊಂದರೆ ನೀಡುವುದಕ್ಕಲ್ಲ. ಆಂಗ್ಲ ಭಾಷೆಯಲ್ಲಿ ಒಂದು ಮಾತಿದೆ 'If any law is an evil, then can't be enforceable' ಸಹಕಾರಿಗಳಿಗೆ ಸಂತಸದಾಯಕವಾದ ಸುದ್ದಿಯೊಂದಿದೆ. ಶ್ರೀ ಜಸ್‌ಬೀರ್‌ಸಿಂಗ್ ಚೌಹಾಣ್, ಬೆಳಗಾವಿ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ಈ ಕೆಳಗಿನ ಪ್ರಕರಣಗಳಲ್ಲಿ ಸಹಕಾರಿಗಳ ಪರವಾಗಿ ನೀಡಿರುವ ತೀರ್ಪುಗಳು ಹಲವಾರು ಸೌಹಾರ್ದ ಸಹಕಾರಿಗಳ ಮುಂದಿನ ಹೋರಾಟಕ್ಕೆ ದಾರಿ ದೀಪವಾಗಿದೆ.

1. ದಿ ಯಮಕನಮರಡಿ ಲಕ್ಷ್ಮೀ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಮಕನಮರಡಿ (ITA No.97/BGM/12-13)
2. ಶ್ರೀ ಮಹಾವೀರ್ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ (ITA No.98/BGM/12-13)




3. ಶ್ರೀ ಬ್ರಹ್ಮದೇವ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಮಕನಮರಡಿ (ITA No.101/BGM/12-13)
4. ಶ್ರೀ ನಾಮದೇವ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸಂಕೇಶ್ವರ (ITA No.144/BGM/12-13)
5. ಶ್ರೀ ಮಹಾವೀರ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಹುಕ್ಕೇರಿ (ITA No.147/BGM/12-13)
6. ಶ್ರೀ ಶಂಕರಲಿಂಗ ಕೋ–ಆಫರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಸಂಕೇಶ್ವರ (ITA No.151/BGM/12-13)

ಈ ಮೇಲಿನ ಎಲ್ಲಾ ತೀರ್ಪುಗಳನ್ನು ಬೆಳಗಾವಿಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ನೀಡಿದ್ದು, ಅವರು ತಮ್ಮ ತೀರ್ಪಿನಲ್ಲಿ ಸಹಕಾರಿಗಳು ಆದಾಯ ತೆರಿಗೆಯಿಂದ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ) ರಡಿ ಹೇಗೆ ವಿನಾಯಿತಿ ಹೊಂದಿರುತ್ತವೆ ಎಂಬುದನ್ನು ತಿಳಿಸಿರುತ್ತಾರೆ (Ratio Decidendi). ಅದನ್ನು ನಾವು ಗಮನಿಸೋಣ.

ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರ ತಿರ್ಪಿಗೂ ಪೂರ್ವದಲ್ಲಿ ತೀರ್ಪು ನೀಡಿದ್ದ ಅಸೆಸಿಂಗ್ ಅಧಿಕಾರಿ ಸಹಕಾರಿಗೆ ಆದಾಯ ತೆರಿಗೆ ಅನ್ವಯಿಸುತ್ತದೆ ಎಂಬುದಕ್ಕೆ ಈ ಕೆಳಗಿನ ಕಾರಣಗಳ ನೀಡಿರುತ್ತಾರೆ (The Assessing Officer had disallowed the deduction under section 80P (2)(a)(i) of the Income Tax Act, 1961 for below mentioned reasons)

1. 1. ಸಹಕಾರಿಯು ಬ್ಯಾಂಕಿಂಗ್ ಚಟುವಟಿಕೆಯಲ್ಲಿ ನಿರತವಾಗಿದ್ದು ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949ರ ಕಲಂ 5(ಛಿಛಿತ) ರನ್ವಯ ಪ್ರಾಥಮಿಕ ಸಹಕಾರಿ ಬ್ಯಾಂಕ್ ಆಗಿರುತ್ತದೆ.

2. ಸಹಕಾರಿಯು ಒಂದು ಲಕ್ಷಕ್ಕಿಂತ ಹೆಚ್ಚಿನ ಪಾವತಿಯಾದ ಶೇರು ಬಂಡವಾಳ ಹೊಂದಿರುವ ಸಹಕಾರಿಯು ತನ್ನಿಂತಾನೆ ಬ್ಯಾಂಕ್ ಆಗಿ ಪರಿವರ್ತನೆ ಹೊಂದುತ್ತದೆ.

3. ಆದಾಯ ತೆರಿಗೆ ಅಧಿನಿಯಮ,1961ರ ಕಲಂ 2(24)ರನ್ವಯ ಆದಾಯ ತೆರಿಗೆ ಕಲಂ 80(ಪಿ)(2)(ಎ)(ಐ)ಯಲ್ಲಿನ ವಿನಾಯಿತಿಯು ಕೇವಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿಗಳಿಗೆ ಮತ್ತು ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೆ ಮಾತ್ರ ಅನ್ವಯಿಸುತ್ತದಯೇ ಹೊರತು ಉಳಿದ ಸಹಕಾರಿಗಳಿಗಲ್ಲ.

4. ಪ್ರಾಥಮಿಕ ಸಹಕಾರಿಯು ಈ ಕೆಳಗಿನ ಪ್ರಮುಖ ಉದ್ದೇಶಗಳನ್ನು ಹೊಂದಿದ್ದು ಅದರ ಆಧಾರದ ಮೇಲೆ ಪ್ರಾಥಮಿಕ ಸಹಕಾರ ಬ್ಯಾಂಕ್ ಎಂದು ಪರಿಗಣಿಸಬೇಕಾಗುತ್ತದೆ, ಹಾಗೆ ಪ್ರಾಥಮಿಕ ಸಹಕಾರಿಯು ಸಹಕಾರ ಬ್ಯಾಂಕ್ ಎಂದು ಪರಿಗಣಿಸಲು ಕಾರನವಾಗುವ ಪ್ರಮುಖ ಅಂಶಗಳು;

a) ಬ್ಯಾಂಕಿಂಗ್ ಚಟುವಟಿಕೆ ನಡೆಸುವುದು ಪ್ರಮುಖ ಉದ್ದೇಶವಾಗಿರುವ

b) ಒಂದು ಲಕ್ಷಕ್ಕಿಂತ ಹೆಚ್ಚಿನ ಪಾವತಿಯಾದ ಶೇರು ಬಂಡವಾಳ ಹೊಂದಿರುವ

c) ಸಹಕಾರಿಯ ಉಪವಿಧಿಯು ಇನ್ನೊಂದು ಸಹಕಾರಿಯ ಸದಸ್ಯತ್ವ ಹೊಂದಲು ಅವಕಾಶವಿಲ್ಲದ

ಈ ಮೇಲಿನ ಕಾರಣಗಳಿಗಾಗಿ ಸಹಕಾರಿಗೆ ಆದಾಯ ತೆರಿಗೆ ಕಲಂ 80ಪಿ(2)(ಎ)(ಐ)ರಡಿ ವಿನಾಯಿತಿ ಇರುವುದಿಲ್ಲವೆಂದು ತೀರ್ಪನ್ನು ನೀಡಿರುತ್ತಾರೆ.

ಈ ತೀರ್ಪಿನ ವಿರುದ್ಧ ಬಾಧಿತ ವ್ಯಕ್ತಿಗಳು (ತೀರ್ಪು ಋಣಿಗಳು) ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರಿಗೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯಲ್ಲಿ ತೀರ್ಪು ಋಣಿಗಳು ತಮ್ಮ ಸಮರ್ಥನೆಯನ್ನು ಸಲ್ಲಿಸಿದ್ದು ಮಾನ್ಯ ಆದಾಯ ತೆರಿಗೆ ಆಯುಕ್ತರು (ಮೇಲ್ಮನವಿ) ಇವರು ಸದರಿ ವಾದವನ್ನು ಪುರಸ್ಕರಿಸಿ ಪತ್ತಿನ ಚಟುವಟಿಕೆ ನಡೆಸುತ್ತಿರುವ ಸಹಕಾರಿಗಳು ಆದಾಯ ತೆರಿಗೆ ಕಲಂ 80ಪಿ(2)(ಎ)(ಐ) ರಡಿ ವಿನಾಯಿತಿ ಹೊಂದಿರುತ್ತವೆ ಎಂದು ತೀರ್ಪನ್ನು ನೀಡಿರುತ್ತಾರೆ. ಈ ಪ್ರಕರಣದಲ್ಲಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಪಾಂಡುರಂಗ ಸಿಂಪಿಯವರು ಸಹಕಾರಿಗಳ ಪರವಾಗಿ ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಸಹಕಾರಿಗಳು ಪಾಂಡುರಂಗ ಸಿಂಪಿಯವರನ್ನು ಸಂಪರ್ಕಿಸ ಬಹುದಾಗಿದ್ದು ಅವರ ದೂರವಾಣಿ ಸಂಖ್ಯೆ 9448142674 ಆಗಿರುತ್ತದೆ.

**ತೀರ್ಪಿನ ಪ್ರಮುಖ ಅಂಶಗಳು :**

1. ದಿನಾಂಕ 01.07.2007ರಿಂದ ಜಾರಿಗೆ ಬಂದಿರುವ ಆರ್ಥಿಕ ಅಧಿನಿಯಮ,2006ರ ಮೂಲಕ ಸಹಕಾರ ಬ್ಯಾಂಕುಗಳನ್ನು ಆದಾಯ ತೆರಿಗೆ ಪಾವತಿಯ ವ್ಯಾಪ್ತಿಯಲ್ಲಿ ತರಲಾಗಿರುತ್ತದೆ. ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆ ಮಾಡುವ ಮೂಲ ಉದ್ದೇಶ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದಾಯ ತೆರಿಗೆ ವಿಧಿಸುವುದಾಗಿರುತ್ತದೆ. ಇದರಿಂದ ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಆದಾಯ ತೆರಿಗೆ ಅನ್ವಯವಾಗುವುದು ಮತ್ತು ಉಳಿದ ಸಹಕಾರಿಗಳು ಆದಾಯ ತೆರಿಗೆ ವಿನಾಯಿತಿ ಹೊಂದಿರುವುದು ಸ್ಪಷ್ಟವಾಗುತ್ತದೆ ಮತ್ತು ಪ್ರಾಥಮಿಕ ಸಹಕಾರಿಗಳನ್ನು ಆದಾಯ ತೆರಿಗೆ ವ್ಯಾಪ್ತಿಯಲ್ಲಿ ತರುವುದಿದ್ದರೆ ಕಲಂ 80ಪಿ(2)(ಎ)(ಐ) ಯನ್ನು ರದುಗೊಳಿಸಬಹುದಿತ್ತೆ ವಿನಃ ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆಗೊಳಿಸುವ ಅವಶ್ಯಕತೆ ಇರಲಿಲ್ಲ. ಅಲ್ಲದೆ ಕಲಂ 80ಪಿ(4)ನ್ನು ಸೇರ್ಪಡೆಗೊಳಿಸುವಾಗಿನ ಕೇಂದ್ರ ಆರ್ಥಿಕ ಮಂತ್ರಿಗಳಾಗಿದ್ದ ಶ್ರೀಯುತ ಪಿ.ಚಿದಂಬರಂರವರು ಆಯ-ವ್ಯಯದ ಮೇಲಿನ ಭಾಷಣದಲ್ಲಿ ಕಲಂ 80ಪಿ(4)ಗಿನ ಸೇರ್ಪಡೆ ಕುರಿತು ಈ ಕೆಳಗಿನಂತೆ ಸಂಸತ್ತಿನಲ್ಲಿ ಭಾಷಣ ಮಾಡಿರುತ್ತಾರೆ;

Shri P. Chidambaram Sir, the next issue, on which there are some questions raised on Direct Taxes, is Section 80(P). Let me take a few minutes on dealing with this issue. We have not removed the exemption to co-operatives in general. We have only removed it for certain co-operative banks. All

ದಿನಾಂಕ 01.07.2007ರಿಂದ ಜಾರಿಗೆ ಬಂದಿರುವ ಆರ್ಥಿಕ ಅಧಿನಿಯಮ, 2006ರ ಮೂಲಕ ಸಹಕಾರ ಬ್ಯಾಂಕುಗಳನ್ನು ಆದಾಯ ತೆರಿಗೆ ಪಾವತಿಯ ವ್ಯಾಪ್ತಿಯಲ್ಲಿ ತರಲಾಗಿರುತ್ತದೆ. ಕಲಂ 80ಪಿ(4)ನ್ನು ಹೊಸದಾಗಿ ಸೇರ್ಪಡೆ ಮಾಡುವ ಮೂಲ ಉದ್ದೇಶ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಆದಾಯ ತೆರಿಗೆ ವಿಧಿಸುವುದಾಗಿರುತ್ತದೆ.

Co-operatives which are in dairy, weaving and in other co-operatives where the principle of mutuality applies continue to enjoy exemption under Section 80(P). We have removed exemption for one category of co-operative banks. Why? Today, there are 1,08,791 institutions which, do one form of banking or another. Out of these 1,08,791 institutions, 1,05,735 institutions are primary agricultural credit societies which are expressly exempt. Therefore, nobody should have any fear that there are being taxed. Then we have 768 Primary Co-operative Agricultural & Rural Development Banks which are also expressly exempt. These leave only 2,288 banks falling under four categories-urban Co-operative Banks, State Co-operative Banks, Central Co-operative Banks and State Co-operative Agricultural Rural Development Banks, that is banks at the Apex level and banks at the district level. These are 2,288 in number.

Sir, today Member after Member have met me and said that these banks are mismanaged; there is malfeasance and misfeasance; the monies of the depositors are not paid and they requested me to pay to the depositors out of the Credit Insurance Corporation. In Gujarat we have finally released Rs.1,00,000/- per depositor. Hundreds of Members have met me and said that the whole thing is in the hands of worst people in this country. Why? It is because they are not subjected to any kind of regulation. Today all that they have say is that they are banks and are covered under Section 80(P). They do not even file their income tax returns and audited statement of accounts. They are under State Regulators. Now, we all know that State Regulators have failed. In Gujarat, dozens of banks collapsed; In Maharashtra, dozens of banks have collapsed. In Madurai, the Urban City Bank has collapsed. In my own district, the DCCB is under moratorium by the Reserve Bank of India. Now, the only way we can bring in some discipline and save these Banks is to make them file proper audited income and expenditure statement which can be scrutinized by the Income Tax Department. Today out of the 2288 banks, which have now been brought under the Income Tax net, one half of them, are reporting losses and so they are not paying any income tax. They would pay tax only when they are working profits. But, I do not believe that one half of them are making losses. One half of them are reporting losses because nobody is questioning them, nobody is looking at them. Now let me say with humility, if we allow this situation continues, then all of them will one day make losses. We have to bring some discipline. They are banks and the principle of mutuality does not apply there because they are lending even to non-members. Public deposits are taken and they are lending to even non-members. What they do is that they take certain categories of members and call them nominal members. They take rupee one from them and begin to lend them. These banks are like any other banks.

Many of them are scheduled banks also because they are in the schedule to the RBI Act. We are bringing only these banks under taxation under Section 80(P). If you make a profit, please pay taxes. Whether you are making profit or not, I can find them only if you are required to file an audited income and expenditure statement. I think it is important step in order to bring some financial and management discipline into these Banks. I humbly appeal to the House to allow me to do this…

2. ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಅಧಿನಿಯಮವು ಅನ್ವಯವಾಗುವುದಿಲ್ಲವಾದ ಕಾರಣ ಮತ್ತು ಸಹಕಾರಿಯು ಬ್ಯಾಂಕಿಂಗ್ ಚಟುವಟಿಕೆ ನಡೆಸಲು ಪರವಾನಗಿ ಪಡೆದಿಲ್ಲದ ಕಾರಣ ಅಸೆಸಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟಿರುವಂತೆ ಪ್ರಾಥಮಿಕ ಸಹಕಾರಿಯು 'ಬ್ಯಾಂಕ್' ಆಗಿರುವುದಿಲ್ಲ. ಅಲ್ಲದೆ ಯಾವುದನ್ನೆ ಆಗಲೀ ಬ್ಯಾಂಕ್ ಎಂದು ಪರಿಗಣಿಸಲು ಈ ಕೆಳಗಿನ ಮೂರು ಪ್ರಮುಖ ಅಂಶಗಳು ಅಗತ್ಯವಾಗಿದ್ದು ಅದರ ಹೊರತಾಗಿ ಬ್ಯಾಂಕ್ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ.

a) ಸಾರ್ವಜನಿಕರಿಂದ ಠೇವಣಿಯನ್ನು ಸಾಲ ಮತ್ತು ಹೂಡಿಕೆಯ ಉದ್ದೇಶಕ್ಕಾಗಿ ಸ್ವೀಕರಿಸಿರುವ;

b) ಸಾರ್ವಜನಿಕರ ಠೇವಣಿ ಹಣವನ್ನು ಕೇಳಿದಾಗ ಮರುಪಾವತಿಸುವ;

c) ಹಣವನ್ನು ಚೆಕ್, ಡ್ರಾಫ್ಟ್, ಆದೇಶ ಮತ್ತು ಇನ್ನ್ಯಾವುದರ ಮೂಲಕ ಪಡೆದುಕೊಳ್ಳು ಅವಕಾಶವಿದ್ದಲ್ಲಿ ಅದನ್ನು ಬ್ಯಾಂಕ್ ಎಂದು ಪರಿಗಣಿಸಬಹುದಾಗಿರುತ್ತದೆ. ಆದರೆ ಒಂದು ಪ್ರಾಥಮಿಕ ಸಹಕರಿ

ಸಂದರ್ಭದಲ್ಲಿ ಮೇಲಿನ ಈ ಮೂರು ಅಂಶಗಳು ಸಾಧ್ಯವಿಲ್ಲದ ಕಾರಣ ಮತ್ತು ಕೇವಲ ಒಂದು ಲಕ್ಷ ರೂಪಾಯಿಗಳ ಪಾವತಿಯಾದ ಶೇರು ಬಂಡವಾಳ ಇದ್ದ ಮಾತ್ರಕ್ಕೆ ಸಹಕಾರಿಯನ್ನು ಬ್ಯಾಂಕ್ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ.

3. ಸಹಕಾರಿಯು ಇನ್ನೊಂದು ಸಹಕಾರಿಯನ್ನು ತನ್ನ ಸದಸ್ಯನಾಗಿ ಹೊಂದಲು ಅವಕಾಶವಿರುತ್ತದೆ. ಸಹಕಾರಿಯು ತನ್ನ ಉಪವಿಧಿಯಲ್ಲಿ 'ಸಹಕಾರಿಯ ಕಾರ್ಯವ್ಯಾಪ್ತಿಯಲ್ಲಿ ವಾಸಿಸುವ ಅಥವಾ ವ್ಯವಹಾರ ಅಥವಾ ವ್ಯಾಪಾರವನ್ನು ಹೊಂದಿರುವ' ಎಂಬ ಶಬ್ದವು ಒಂದು ಸಹಕಾರಿಯು ಇನ್ನೊಂದು ಸಹಕಾರಿಯನ್ನು ಸದಸ್ಯನಾಗಿ ಹೊಂದಲು ಅವಕಾಶ ಕಲ್ಪಿಸುತ್ತದೆ.

ಈ ಮೇಲಿನ ಕಾರಣಗಳ ಆಧಾರದ ಮೇಲೆ ಸಹಕಾರಿಯು ಆದಾಯ ತೆರಿಗೆ ಅಧಿನಿಯಮ, 1961ರ ಕಲಂ 80ಪಿ(2)(ಎ)(ಐ)ರಡಿಯಲ್ಲಿ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಹೊಂದಿರುತ್ತದೆ ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಆದಾಯ ತೆರಿಗೆ ಇಲಾಖೆಯ ಅಸೆಸಿಂಗ್ ಅಧಿಕಾರಿಗಳು ಪ್ರತಿಯೊಂದು ಸಹಕಾರಿಯ ಪ್ರಕರಣವು ಭಿನ್ನವೆಂದು ಪರಿಗಣಿಸಿ ಬೇರೆಯದೆ ಆದ ನಿರ್ವಚನ ಮಾಡಿ ಸಹಕಾರಿಗೆ ಆದಾಯ ತೆರಿಗೆ ವಿಧಿಸುತ್ತಿದ್ದಾರೆ. ಅಂತಹ ಸಂದರ್ಭಗಳಲ್ಲಿ ಸಹಕಾರಿಗಳು ಆದಾಯ ತೆರಿಗೆ ಪಾವತಿಸದೆ ಸಂಬಂಧಿಸಿದ ಪ್ರಾಧಿಕಾರದ ಮುಂದೆ ಪ್ರಕರಣವನ್ನು ದಾಖಲಿಸುವ ಮೂಲಕ ಆದಾಯ ತೆರಿಗೆ ಪಾವತಿಯಿಂದ ವಿನಾಯಿತಿ ಪಡೆಯಬಹುದಾಗಿರುತ್ತದೆ. ಪತ್ತಿನ ಚಟುವಟಿಕೆ ನಡೆಸುವ ಸಹಕಾರಿಗಳು ಆದಾಯ ತೆರಿಗೆ ಪಾವತಿಯ ವಿನಾಯಿತಿಯಿಂದ ಹೊಂದಿರುವ ಕುರಿತಂತೆ ನಿರ್ಧರಿತ ಪ್ರಕರಣಗಳು ಈ ಕೆಳಗಿನಂತಿದೆ.

1. The Assistant Comissioner of Income Tax Circle 391, Bangalore v/s Bangalore Commercial Transport (ITA No:1069/Bang/2010. (AY 2007-08)

2. Commissioner of Income Tax Circle Panaji v/s Dwaraka Souharda Credit Sahakari Ltd., 9ITA No.202/203/204/ DCIT/cc Panaji/CIT(A)-VI/2010-11) (Assesment Year 2007-08, 2008-09 and 2009-10)

3. 3. ಯಶವಂತಪುರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ITA No:737/Bang/2011) (Assesment Year 2007-08)

4. 4. ಜಯಲಕ್ಷ್ಮೀ ಮಹಿಳಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಅಂಕೋಲಾ (ITA No:01 to 03/PNJ/2012 dated 31.03. 2012 Assesment Year 2007-08, 2008-09 and 2009-10)

5. 5. ದ್ವಾರಕ ಸೌಹಾರ್ದ ಕ್ರೆಡಿಟ್ ಸಹಕಾರಿ ಲಿ., ಅಂಕೋಲಾ (ITA Nos:04 to 06/LNJ/2012 dated 31.03.2012 Assesment Year 2007-08, 2008-09 and 2009-10)

ಈ ಪ್ರಕರಣದಲ್ಲಿ ಸಹಕಾರಿಯ ಪರವಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಸುಬ್ರಹ್ಮಣ್ಯ ಹೆಗಡೆಯವರು ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಅವರ ದೂರವಾಣಿ ಸಂಖ್ಯೆ 9448136855 ಸಂಪರ್ಕಿಸಬಹುದಾಗಿರುತ್ತದೆ.

6. ಸಮರ್ಥ ಅರ್ಬನ್ ಕೋ–ಆಫರೇಟಿವ್ ಸೊಸೈಟಿ ಲಿ., ಬೆಳಗಾವಿ (ITA Nos:662/BGM/2010-11 dated 28.11.2011 Assesment Year 2008-09)

7. ಕೇರಳಾ ಕೋ–ಆಫರೇಟಿವ್ ಕಂಜ್ಯೂಮರ್ಸ್ ಫೇಡರೇಶನ್ ಲಿ., v/s CIT 170 ITR 455.

8. ಅಡಿಷನಲ್ ಸಿಐಟಿ v/s ಯುಪಿ ಕೋ–ಆಫರೇಟಿವ್ ಕೆನೆ ಯೂನಿಯನ್ 114 ಐಟಿಆರ್ 70

9. ಸಿಐಟಿ v/s ಕೋ–ಆಫರೇಟಿವ್ ಸಪ್ಲೈ ಅಂಡ್ ಕಮೀಷನ್ ಶಾಫ್ ಲಿ., 204 ಐಟಿಆರ್ 713.

10. Asistant Commissioner of Income tax, Circle iv V/S Buldana Urban Credit Society Ltd., (ITA Nos:151 to 153 and 179 to 181 (NAG) of 2012 dated 23.11.2012)

11. ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಫರೇಟಿವ್ ಲಿ., (ITA. NO 71-73/AC-3(1)/CIT(A)-II/11-12) (Assesment Year 2007-08, 2008-09 and 2010-11) ಈ ಪ್ರಕರಣದಲ್ಲಿ ಸಹಕಾರಿಯ ಪರವಾಗಿ ಸನ್ನದು ಲೆಕ್ಕಪರಿಶೋಧಕರಾದ ಶ್ರೀಯುತ ಮಧುಕರ ಹೆಗಡೆಯವರು ವಾದಿಸಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಅವರ ದೂರವಾಣಿ ಸಂಖ್ಯೆ 9448151454 ಸಂಪರ್ಕಿಸಬಹುದಾಗಿರುತ್ತದೆ.

12. ಶ್ರೀ ಅರಿಹಂತ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬೋರಗಾಂವ್ (ITA.NO 145/BGM/11-12) (Assesment Year 2009-10)

ಆದಾಯ ತೆರಿಗೆ ಇಲಾಖೆಯು ಸಹಕಾರಿಗಳಿಗೆ ಆದಾಯ ತೆರಿಗೆ ಪಾವತಿಗೆ ನೋಟೀಸ್ ನೀಡುತ್ತಿರುವುದರ ಕುರಿತು ಸಂಯುಕ್ತ ಸಹಕಾರಿಯು ಈಗಾಗಲೇ ಪರೋಕ್ಷವಾಗಿ ಕಾನೂನು ಸಮರವನ್ನು ನಡೆಸುತ್ತಿದೆ ಮತ್ತು ಸಂಬಂಧಪಟ್ಟ ಸಚಿವರಿಗೆ ಮತ್ತು ಪ್ರಾಧಿಕಾರಕ್ಕೆ ಪತ್ರವನ್ನೂ ಬರೆದಿರುತ್ತದೆ. ಅಲ್ಲದೆ ಆದಾಯ ತರಿಗೆ ಪ್ರಾಧಿಕಾರದ ಅಧಿಕಾರಿಗಳನ್ನೂ ಸಹ ಬೇಟಿ ಮಾಡಿ ಚರ್ಚಿಸಿರುತ್ತದೆ. ಸಹಕಾರಿಗಳು ಆದಾಯ ತೆರಿಗೆ ಪಾವತಿ ಕುರಿತಂತೆ ಯಾವುದೇ ನೋಟೀಸ್ ಬಂದಲ್ಲಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ. ಸಂಯುಕ್ತ ಸಹಕಾರಿಯು ಆದಾಯ ತೆರಿಗೆ ಕುರಿತಂತೆ ಅಗತ್ಯ ನೆರವು ನೀಡಲು ಸಿದ್ದವಿದ್ದು, ಸಹಕಾರಿಗಳು ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ■


ಶ್ರೀ ಗುರುನಾಥ ಜ್ಯಾಂತೀಕರ
ಅಧ್ಯಕ್ಷರು, ಬೀದರ್


ಶ್ರೀ ಹೆಚ್.ವಿ. ರಾಜೀವ
ಉಪಾಧ್ಯಕ್ಷರು, ಮೈಸೂರು.


ಶ್ರೀ ಶಾಂತಿನಾಥ ಪಂಡಿತ
ಗುಲ್ಬರ್ಗ


ಶ್ರೀ ವೈ.ಟಿ. ಪಾಟೀಲ
ಯಾದಗಿರಿ


ಶ್ರೀ ಎಲ್.ಎಸ್. ಆನಂದ
ಬಳ್ಳಾರಿ


ಶ್ರೀಮತಿ ಮಂಜುಳಾ ಪಾಟೀಲ
ರಾಯಚೂರು


ಶ್ರೀ ಕೆ. ಸಣ್ಣಸೂಗಪ್ಪ
ಕೊಪ್ಪಳ


ಶ್ರೀ ಅರುಣ ಶಹಾಪೂರ (ಎಂ.ಎಲ್.ಸಿ.)
ಬಿಜಾಪುರ


ಶ್ರೀ ರಾವಸಾಹೇಬ ಅ.ಪಾಟೀಲ್
ಬೆಳಗಾವಿ


ಶ್ರೀ ರವಿ ರಾಮಚಂದ್ರ ಯಲಿಗಾರ
ಧಾರವಾಡ


ಶ್ರೀ ಆರ್.ಎನ್. ದೇಶಪಾಂಡೆ
ಗದಗ


ಶ್ರೀ ಎಮ್.ಬಿ. ಕಲಾಲ
ಹಾವೇರಿ


ಶ್ರೀ ಭಾಸ್ಕರ ಹೆಗಡೆ ಕಾಗೇರಿ
ಉತ್ತರ ಕನ್ನಡ


ಶ್ರೀ ರವಿಕುಮಾರ್ ಹೆಚ್.ವಿ.
ಶಿವಮೊಗ್ಗ


ಶ್ರೀ ಎಸ್.ಆರ್. ಲಕ್ಷ್ಮಿ ಕಾಂತರೆಡ್ಡಿ
ಚಿತ್ರದುರ್ಗ


ಶ್ರೀ ನಂಜನಗೌಡ ಜಿ.
ದಾವಣಗೆರೆ


ಶ್ರೀ ಜಿ.ಎಸ್. ಮಹಾಬಲ
ಚಿಕ್ಕಮಗಳೂರು


ಶ್ರೀ ಭಾಸ್ಕರ ಕಾಮತ್
ಉಡುಪಿ


ಶ್ರೀ ಎಂ.ಕೆ. ಸೋಮಯ್ಯ
ಕೊಡಗು


ಶ್ರೀ ಎಸ್.ಆರ್. ಸತೀಶ್‌ಚಂದ್ರ
ದಕ್ಷಿಣ ಕನ್ನಡ


ಶ್ರೀ ಆರ್. ದಿನೇಶ ಗುಪ್ತ
ಚಾಮರಾಜನಗರ


ಶ್ರೀ ಬಿ. ಶಿವರುದ್ರಪ್ಪ
ಹಾಸನ


ಶ್ರೀ ಬಿ. ಗಂಗಾಧರಯ್ಯ
ತುಮಕೂರು


ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಕೋಲಾರ


ಶ್ರೀ ನಾಗೇಂದ್ರ ಗುಪ್ತ
ಚಿಕ್ಕಬಳ್ಳಾಪುರ


ಶ್ರೀ ಆಂಜನೇಯ ಗುಪ್ತ
ರಾಮನಗರ


ಶ್ರೀ ಎನ್. ರಮೇಶ
ಬೆಂಗಳೂರು ಗ್ರಾಮಾಂತರ


ಶ್ರೀಮತಿ ಹೆಚ್.ಸಿ. ನಾಗರತ್ನ
ಬೆಂಗಳೂರು ನಗರ


ಶ್ರೀ ಶ್ರೀಕಾಂತ ಹತನೂರೆ
ಆಹ್ವಾನಿತ ಸದಸ್ಯರು


ಶ್ರೀ ಜಯಾನಂದ ಬಿ. ಜಾದವ್
ಆಹ್ವಾನಿತ ಸದಸ್ಯರು


ಶ್ರೀ ಶರಣಗೌಡ ಜಿ. ಪಾಟೀಲ್
ವ್ಯವಸ್ಥಾಪಕ ನಿರ್ದೇಶಕರು

Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13.
RNI No. KARBIL - 2004/18001. Pages 20

# ಸಹಕಾರ ಕಾಯ್ದೆಗಳಿಗೆ ಶೀಘ್ರದಲ್ಲಿ ಅವಶ್ಯಕ ತಿದ್ದುಪಡಿ : ಸಚಿವ ಶ್ರೀ ಮಹದೇವಪ್ರಸಾದ್

ಬೀದರ ಜಿಲ್ಲಾ ಸಹಕಾರಿ ಸಮಾವೇಶದಲ್ಲಿ ಜಿಲ್ಲೆಯ ಸಹಕಾರಿಗಳಿಂದ ಅಭಿನಂದನೆ ಸ್ವೀಕರಿಸಿದ ನಂತರ ಬೃಹತ ಸಮಾವೇಶವನ್ನುವನ್ನು ಉದ್ದೇಶಿಸಿ ಮಾತನಾಡಿದ ಸಚಿವ ಶ್ರೀ ಮಹದೇವಪ್ರಸಾದರವರು ಸಹಕಾರ ಕ್ಷೇತ್ರ ಅತ್ಯಂತ ಪವಿತ್ರವಾದ ಕ್ಷೇತ್ರ. ಸಾರ್ವಜನಿಕರಿಗೆ ಸೇವೆ ಸಲ್ಲಿಸಲು ಅವಕಾಶವಿರುವ ಕ್ಷೇತ್ರ. ಈ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಬೇಕು. ಯಾವುದೇ ಕಾರಣಕ್ಕೂ ಈ ಕ್ಷೇತ್ರವನ್ನು ಶಿಥಿಲಗೊಳಿಸುವ ಪ್ರಯತ್ನಗಳಿಗೆ ಅವಕಾಶನೀಡಬಾರದು. 97 ನೇ ಸಂವಿಧಾನ ತಿದ್ದುಪಡಿ ಆಧಾರದ ಮೇಲೆ ಸಹಕಾರಿ ಕಾಯ್ದೆ 1959 ಹಾಗೂ ಸೌಹಾರ್ದ ಸಹಕಾರಿ ಕಾಯ್ದೆ 1997ಗಳಿಗೆ ತಿದ್ದುಪಡಿಗಳನ್ನು ಮಾಡುವಾಗ ಕೆಲವು ಲೋಪಗಳಾಗಿವೆ. ಅವುಗಳನ್ನು ಶೀಘ್ರದಲ್ಲಿ ಸರಿಪಡಿಸುವ ಕ್ರಮವನ್ನು ಇಡಲಾಗುವುದು ಎಂದು ತಿಳಿಸಿದರು. ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಒಬ್ಬ ಸಾಮಾನ್ಯ ಕಾರ್ಯಕರ್ತ ಸಹಕಾರಿ ಕ್ಷೇತ್ರದಲ್ಲಿ ಎಷ್ಟರ ಮಟ್ಟಿಗೆ ಬೆಳೆಯಲು ಅವಕಾಶಗಳಿವೆ ಎಂಬುದಕ್ಕೆ ರಾಜ್ಯಮಟ್ಟದ ಸಹಕಾರಿ ಸಂಸ್ಥೆಯ ಅಧ್ಯಕ್ಷರಾಗಿ ಕರ್ನಾಟಕ ಸರಕಾರದ "ಸಹಕಾರಿ ರತ್ನ" ಪ್ರಶಸ್ತಿ ಪಡೆಯುವ ಸೌಭಾಗ್ಯದ ಜೊತೆಗೆ ಇಡೀ ಜಿಲ್ಲೆಯ ಸಹಕಾರಿಗಳಿಂದ ಇಂತಹ ಬೃಹತ ಸಮಾವೇಶದಲ್ಲಿ ಸನ್ಮಾನಕ್ಕೆ ಪಾತ್ರರಾಗಿರುವ ಶ್ರೀ ಗುರುನಾಥ ಜ್ಯಾಂತಿಕರರೇ ಸಾಕ್ಷಿ ಎಂದು ತಿಳಿಸಿ ಶ್ರೀಯುತರನ್ನು ಅಭಿನಂದಿಸಿದರು.

ಬೀದರ ಜಿಲ್ಲೆಯ ಎಲ್ಲ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿಯ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಗುರುನಾಥ



ಜ್ಯಾಂತಿಕರರವರನ್ನು ಸನ್ಮಾನಿಸಲಾಯಿತು.ಕಾರ್ಯಕ್ರಮದ ಸಾನಿಧ್ಯವನ್ನು ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಜ್ಯೋತಿರ್ಮಯಾನಂದ ಸ್ವಾಮಿಜಿ ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರ ಭಾರತೀಯ ರಾಷ್ಟ್ರೀಯ ಸಂಪರ್ಕ ಪ್ರಮುಖ ಶ್ರೀ ರಮೇಶ ವೈದ್ಯರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕ ಶ್ರೀ ಉಮಾಕಾಂತ ನಾಗಮಾರಪಲ್ಲಿ, ವಿಧಾನ ಪರಿಷತ ಸದಸ್ಯ ಶ್ರೀ ರಘುನಾಥ ಮಲ್ಕಾಪುರೆ, ಮಾಜಿ ಶಾಸಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಉಪಾಧ್ಯಕ್ಷ ಶ್ರೀ ನಾರಾಯಣರಾವ ಮನ್ನಳ್ಳಿ, ಹಳ್ಳಿಖೇಡ ಸಹಕಾರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ ಶ್ರೀ ಸಂಜಯ ಖೇಣಿ ಮಿಂತಾದವ ಸಹಕಾರಿ ಗಣ್ಯರು ಒಂದು ಸಾವಿರಕ್ಕೂ ಹೆಚ್ಚು ಸಹಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ■

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | |
|---|---|
| 1. ಅಧ್ಯಕ್ಷರು – ಶ್ರೀ ಗುರುನಾಥ ಜ್ಯಾಂತಿಕರ್ | 8884466701 |
| 2. ಉಪಾಧ್ಯಕ್ಷರು ಶ್ರೀ ಹೆಚ್.ವಿ. ರಾಜೀವ್ | 8884466702 |
| 3. ವ್ಯವಸ್ಥಾಪಕ ನಿರ್ದೇಶಕರು ಶ್ರೀ ಶರಣಗೌಡ ಜಿ. ಪಾಟೀಲ್ | 8884466703 |
| 4. ಉಪ ಪ್ರಧಾನ ವ್ಯವಸ್ಥಾಪಕರು ಶ್ರೀ ನಾರಾಯಣ ಹೆಗ್ಗಡೆ | 8884466704 |
| 5. ಉಪ ಪ್ರಧಾನ ವ್ಯವಸ್ಥಾಪಕರು ಶ್ರೀ ವೈ. ಕುಮಾರ | 8884466705 |
| 6. ಸಹ ಪ್ರಧಾನ ವ್ಯವಸ್ಥಾಪಕರು ಶ್ರೀ ಶ್ರೀಕಾಂತ್ ಬರುವೆ | 8884466706 |
| 7. ಸಹ ಪ್ರಧಾನ ವ್ಯವಸ್ಥಾಪಕರು ಶ್ರೀ ರಘುನಂದನ್ ಕೆ., ಬೆಂ. ವಿಭಾಗ | 8884466707 |
| 8. ಸಹ ಪ್ರಧಾನ ವ್ಯವಸ್ಥಾಪಕರು ಶ್ರೀಮತಿ ಕೃತಿ ಜನಾರ್ಧನ್ | 8884466708 |
| 9. ಸಹ ಪ್ರಧಾನ ವ್ಯವಸ್ಥಾಪಕರು ಶ್ರೀಮತಿ ಶೋಭ ಆರ್. | 8884466709 |
| 10. ತರಬೇತಿ ಅಧಿಕಾರಿ ವಿ.ಜೆ. ಶ್ರೀ ಕಾರಕೂನ | 8884466710 |
| 11. ಬೆಳಗಾವಿ ವಿಭಾಗಾಧಿಕಾರಿ ಶ್ರೀ ಜಿ.ಎಸ್. ಟೋಪಣ್ಣನವರ್ | 8884466711 |
| 12. ಗುಲ್ಬರ್ಗಾ ವಿಭಾಗಾಧಿಕಾರಿ ಶ್ರೀ ಸಂಜಯ ಕೋರಟಕರ | 8884466714 |
| 13. ಮೈಸೂರು ವಿಭಾಗಾಧಿಕಾರಿ ಶ್ರೀ ಶಿವಕುಮಾರ ಬಿರಾದಾರ | 8884466712 |

ಇವರಿಂದ ಪ್ರಕಟಿತ :

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು – 10.

web : www.souharda.coop, E-mail : souharda@souharda.coop,

**ದೂ.ಸಂ :** 23378375/76/77/78/79/80 & 23474408, 23573291

ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜೆ. ಕಾರಕೂನ**

ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

**ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ :** ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551
**ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :** ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ,
ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010